ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 292 RNI Number : KNKAN/25/A2770 05-11-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:292 ರಾಯಚೂರು 05-11-2026 ಗುರುವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಶಕ್ತಿ ಯೋಜನೆಯಿಂದ ಸಾರಿಗೆ ಸಂಸ್ಥೆಗಳ ಮೇಲೆ ಆರ್ಥಿಕ ಹೊರೆ

ಇಂದಿನಿಂದಲೇ ಬಸ್ ಪ್ರಯಾಣ ದರ ಏರಿಕೆ ಸಮರ್ಥಿಸಿಕೊಂಡ ಸಿಎಂ ಡಿಕೆಶಿ



ಬೆಂಗಳೂರು : ಶಕ್ತಿ ಯೋಜನೆಯಡಿ ಸ್ತ್ರೀಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಿರುವುದು ಸಾರಿಗೆ ಸಂಸ್ಥೆಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆಗೆ ಕಾರಣವಾಗಿದ್ದು, ಅವುಗಳ ಉಳಿವಿಗಾಗಿ ಬಸ್ ಪ್ರಯಾಣ ದರದಲ್ಲಿ ಹೆಚ್ಚಳ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಅವರು, ಸಾರಿಗೆ ಸಂಸ್ಥೆಗಳಿಗೆ ಡೀಸೆಲ್ ಖರೀದಿಸಲೂ ಸಹ ಹಣಕಾಸಿನ ಸಮಸ್ಯೆ ಎದುರಾಗಿತ್ತು. ಹೀಗಾಗಿ ಒಂದೊಂದು ಹಂತದಲ್ಲಿ ಎರಡು, ಮೂರು ರೂಪಾಯಿ ದರ ಹೆಚ್ಚಿಸಲಾಗಿದೆ ಎಂದರು.

ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ಸೆಸ್ ಹಾಗೂ ತೆರಿಗೆ ಕಡಿಮೆ ಮಾಡಿ, ಇಂಧನ ಬೆಲೆ ಇಳಿಸಿದರೆ ರಾಜ್ಯದಲ್ಲೂ ಬಸ್ ಪ್ರಯಾಣ ದರ ಕಡಿಮೆ ಮಾಡಲು ಸಿದ್ಧ ಎಂದ ಅವರು, ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ, ರಸಗೊಬ್ಬರ, ಕೀಟನಾಶಕ, ಕಬ್ಬಿಣ, ಸಿಮೆಂಟ್ ಹಾಗೂ ಔಷಧಗಳ ಬೆಲೆ ಹೆಚ್ಚಳವಾದಾಗ ಯಾಕೆ ಪ್ರತಿಪಕ್ಷಗಳು ಧ್ವನಿ ಎತ್ತಲಿಲ್ಲ? ರೈತರು ಬಳಸುವ ಕೃಷಿ ಪರಿಕರಗಳ ಬೆಲೆ ಎಷ್ಟು ಹೆಚ್ಚಾಗಿದೆ ಎಂಬುದರ ಬಗ್ಗೆ ವಿಪಕ್ಷಗಳಿಗೆ ಕಾಳಜಿ ಇಲ್ಲವೇ? ಎಂದು ಪ್ರಶ್ನಿಸಿದರು.

ರಾಜ್ಯದ ಬರಗಾಲ ಸಂದರ್ಭದಲ್ಲಿ ರೈತರು ಎಷ್ಟು ಕಷ್ಟಪಡುತ್ತಿದ್ದಾರೆ ಎಂಬ ಅರಿವು ನನಗಿದೆ. ಅವರ ಬದುಕಿನ ಸಂಕಷ್ಟವೂ ನಮಗೆ ಗೊತ್ತಿದೆ. ಅದೇ ರೀತಿ ಸಾರಿಗೆ ಸಂಸ್ಥೆಗಳೂ ಉಳಿಯಬೇಕು. ಅವುಗಳಿಗೂ ಆರ್ಥಿಕವಾಗಿ ಚೇತರಿಸಿಕೊಳ್ಳಲು ಅವಕಾಶ ನೀಡಬೇಕು. ವಿಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುತ್ತಿರುವ ಸೆಸ್ ಹಾಗೂ ತೆರಿಗೆ ಹೊರೆ ಕಡಿಮೆ ಮಾಡಿಸಲಿ. ಕೇಂದ್ರ ಸರ್ಕಾರ ಇಂಧನ ಬೆಲೆ ಇಳಿಸಿದರೆ ರಾಜ್ಯ ಸರ್ಕಾರವೂ ಅದಕ್ಕೆ ತಕ್ಕಂತೆ ಕ್ರಮ ಕೈಗೊಳ್ಳಲಿದೆ ಎಂದು ಸಿಎಂ ಸವಾಲೆಸೆದರು.

ಹಾಲಿನ ದರ ಏರಿಕೆ ಕುರಿತು ಪ್ರತಿಕ್ರಿಯಿಸಿದ ಸಿಎಂ ಡಿ ಕೆ ಶಿವಕುಮಾರ್, ಹಾಲಿನ ಗುಣಮಟ್ಟ ಮತ್ತು ಕೊಬ್ಬಿನ ಅಂಶಕ್ಕೆ ಅನುಗುಣವಾಗಿ ದರದಲ್ಲಿ ವ್ಯತ್ಯಾಸವಾಗುತ್ತದೆ. ಸಾಮಾನ್ಯ ಹಾಲು, ನಾಟಿ ಹಸುವಿನ ಹಾಲು ಹಾಗೂ ಎಮ್ಮೆ ಹಾಲಿನ ಫ್ಯಾಟ್ ಪ್ರಮಾಣ ಬೇರೆ ಬೇರೆಯಾಗಿರುವುದರಿಂದ ದರವೂ ವಿಭಿನ್ನವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

ರಾಜಮನೆತನದ ಬಗ್ಗೆ ಗೌರವವಿದೆ: ಪ್ರಮೋದಾದೇವಿಯ ವರು ದಸರಾ ಅವ್ಯವಸ್ಥೆಯ ಬಗ್ಗೆ ಸಿಎಂ ಮಾತನಾಡುವುದಾಗಿ ಹೇಳಿದ್ದು ಇನ್ನೂ ಮಾತನಾಡಿಲ್ಲದ್ದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಬಗ್ಗೆ ಕೇಳಿದಾಗ ''ಈ ಬಗ್ಗೆ ನನಗೆ ಗೊತ್ತಿಲ್ಲ. ಈ ರಾಜ್ಯದ ರಾಜಮನೆತನಕ್ಕೆ ಗೌರವ ನೀಡುತ್ತೇವೆ. ಇದರ ಬಗ್ಗೆ ತಿಳಿದುಕೊಂಡು ಅವರೊಂದಿಗೂ ಮಾತನಾಡುತ್ತೇನೆ'' ಎಂದು ಹೇಳಿದರು.

ಹಿಂದುಳಿದ ಜಾತಿಗಳಿಗೆ ಶೇ.33 ಮೀಸಲಾತಿ ನೀಡದಿರುವುದು ಅನ್ಯಾಯ :ಶ್ರೀಕಾಂತ ರಾವ್

ಜಿ.ಪಂ, ತಾಪಂ ಚುನಾವಣೆ ಮೀಸಲಾತಿ ಮರುಪರಿಶೀಲನೆಗೆ ಆಗ್ರಹ

ರಾಯಚೂರು, ನ. 4- ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳಿಗೆ ಕ್ಷೇತ್ರವಾರು ಮೀಸಲಾತಿ ನಿಗದಿಪಡಿಸುವ ಸಂದರ್ಭದಲ್ಲಿ ಇತರ ಹಿಂದುಳಿದ ಜಾತಿಗಳಿಗೆ ಅನ್ಯಾಯವಾಗಿದೆ. ನ್ಯಾಯಮೂರ್ತಿ ಕೆ. ಭಕ್ತವತ್ಸಲ ಆಯೋಗದ ಶಿಫಾರಸ್ಸಿನಂತೆ ಶೇ.33ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ರಾಯಚೂರು ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಜಿಲ್ಲಾ ವಕೀಲರ ಘಟಕದ ಅಧ್ಯಕ್ಷ ಹಾಗೂ ಹಿರಿಯ ವಕೀಲ ಶ್ರೀಕಾಂತ ರಾವ್ ಆಗ್ರಹಿಸಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅ.8ರಂದು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳ ಕ್ಷೇತ್ರವಾರು ಮೀಸಲಾತಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದೆ. ಈ ಮೀಸಲಾತಿ ಕುರಿತು ಆಕ್ಷೇಪಣೆ ಸಲ್ಲಿಸಲು ಅ.19ರವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ, ಪ್ರಕಟಿಸಿರುವ ಮೀಸಲಾತಿ ಹಂಚಿಕೆಯಲ್ಲಿ ಹಿಂದುಳಿದ ಜಾತಿಗಳಿಗೆ ನ್ಯಾಯಯುತ ಪ್ರಾತಿನಿಧ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

1995ರಲ್ಲಿ ಕೊಪ್ಪಳ ಸೇರಿದಂತೆ ಅಖಂಡ ರಾಯಚೂರು ಜಿಲ್ಲೆ ಇದ್ದಾಗ ಇತರ ಹಿಂದುಳಿದ ಜಾತಿಗಳಿಗೆ 19 ಸ್ಥಾನಗಳನ್ನು ಮೀಸಲಿಡಲಾಗಿತ್ತು. 2000ರಲ್ಲಿ ರಾಯಚೂರು ಜಿಲ್ಲೆಯಲ್ಲಿ 10 ಸ್ಥಾನಗಳು ಹಾಗೂ 2006ರಲ್ಲಿ 12 ಸ್ಥಾನಗಳನ್ನು ಮೀಸಲಿಡಲಾಗಿತ್ತು. ಆದರೆ, ಪ್ರಸ್ತುತ ಮೀಸಲಾತಿ ನಿಗದಿಪಡಿಸುವಾಗ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.ದೇಶದ ಸರ್ವೋಚ್ಚ ನ್ಯಾಯಾಲಯದ ಸೂಚನೆಯ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ 2022ರಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ನ್ಯಾಯಮೂರ್ತಿ ಕೆ. ಭಕ್ತವತ್ಸ ಲ ಅವರ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಆಯೋಗವು ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ

ಮೂರನೇಯ ಪುಟಕ್ಕೆ

ಅನಧಿಕೃತ ವಿದ್ಯುತ್ ಬಳಕೆ: 162 ಪ್ರಕರಣ ಪತ್ತೆ, 14.98 ಲಕ್ಷ ರೂ.ದಂಡ



ರಾಯಚೂರು: ರಾಯಚೂರು ಜಿಲ್ಲಾದ್ಯಂತ ಅಕ್ಟೋಬರ್ 2026ರಲ್ಲಿ ಜೆಸ್ಕಾಂ ಅಧಿಕಾರಿಗಳು ಹಾಗೂ ಜಾಗೃತ ದಳದವರು ಕಾರ್ಯಾಚರಣೆ ನಡೆಸಿ, ಅನಧಿಕೃತವಾಗಿ ವಿದ್ಯುತ್ ಬಳಕೆ ಮಾಡುತ್ತಿದ್ದ ಒಟ್ಟು 162 ಪ್ರಕರಣಗಳನ್ನು ಪತ್ತೆಹಚ್ಚಿದ್ದಾರೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಮಾರು 14.98 ಲಕ್ಷ ರೂ. ದಂಡ ವಿಧಿಸಲಾಗಿದೆ.

ಜಿಲ್ಲೆಯಲ್ಲಿ ಅನಧಿಕೃತವಾಗಿ ವಿದ್ಯುತ್ ಬಳಕೆ ಮಾಡುತ್ತಿರುವ ಗ್ರಾಹಕರು ತಕ್ಷಣವೇ ತಮ್ಮ ಸ್ಥಾವರಗಳಿಗೆ ಮೀಟರ್ ಅಳವಡಿಸಿಕೊಂಡು ವಿದ್ಯುತ್ ಬಳಕೆಯನ್ನು ಸಕ್ರಮಗೊಳಿಸಿಕೊಳ್ಳಬೇಕು. ಬಾಕಿ ಇರುವ ಸ್ಥಾವರಗಳ ಗ್ರಾಹಕರು ಕೂಡಲೇ ಬಾಕಿ ಮೊತ್ತವನ್ನು ಪಾವತಿಸಬೇಕು ಎಂದು ಜೆಸ್ಕಾಂ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಅನಧಿಕೃತ ಸ್ಥಾವರಗಳಿಗೆ ಹೆಚ್ಚಿನ ದಂಡ ವಿಧಿಸುವುದರ ಜತೆಗೆ ಕಾಯ್ದೆಯ ಪ್ರಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ರಾಯಚೂರು ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ವೀರ ಹನುಮಾನ್ ಅವರಿಗೆ ಜಿಲ್ಲಾ ಮಡಿವಾಳ ಮಾಚಿದೇವ ಸಮಾಜದಿಂದ ಸನ್ಮಾನ

ರಾಯಚೂರು, ನ.4: 2026ನೇ ಸಾಲಿನ ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ವೀರ ಹನುಮಾನ್ ಅವರನ್ನು ಜಿಲ್ಲಾ ಮಡಿವಾಳ ಮಾಚಿದೇವ ಸಮಾಜ, ಜಿಲ್ಲಾ ಲ್ಯಾಂಡ್ರಿ, ದೋಬಿಘಾಟ್ ಕ್ಷೇಮಾಭಿವೃದ್ಧಿ ಸಂಘ ಹಾಗೂ ಜಿಲ್ಲಾ ಮಹಿಳಾ ಘಟಕದ ವತಿಯಿಂದ ಆತ್ಮೀಯವಾಗಿ



ಸನ್ಮಾನಿಸಿ ಗೌರವಿಸಲಾಯಿತು.

ನಗರದಲ್ಲಿ ನವೆಂಬರ್ 4ರಂದು ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ವೀರ ಹನುಮಾನ್ ಅವರ ಸಾಹಿತ್ಯಿಕ ಸಾಧನೆ ಹಾಗೂ ಕನ್ನಡ ನಾಡು, ನುಡಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅಭಿನಂದಿಸಲಾಯಿತು. ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವುದು ಸಮಾಜಕ್ಕೆ ಹಾಗೂ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಮುಖಂಡರು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಜಿ. ಶಿವಮೂರ್ತಿ, ಟಿ. ಮಲ್ಲೇಶ್, ನರಸಪ್ಪ ಯಾಕ್ಲಾಪುರ, ಜಿಲ್ಲಾ ಅಧ್ಯಕ್ಷ ಯು. ಆಂಜನೇಯ, ಗೌರವಾಧ್ಯಕ್ಷ ಬಿಚ್ಚಾಲಿ ವಿರೂಪಾಕ್ಷಿ, ದೋಬಿಘಾಟ್ ಅಧ್ಯಕ್ಷ ಈ. ಚಂದಪ್ಪ, ಗೌರವಾಧ್ಯಕ್ಷ ಬಿಚ್ಚಾಲಿ ನರಸಿಂಗಪ್ಪ, ಪ್ರಧಾನ ಕಾರ್ಯದರ್ಶಿ ಡಿ. ಶಿವಶಂಕರ್, ಮಹಿಳಾ ಘಟಕದ ಅಧ್ಯಕ್ಷೆ ಜಮುನಾ ಕೇಶವ, ಪ್ರಧಾನ ಕಾರ್ಯದರ್ಶಿಗಳಾದ ಅಶ್ವಿನಿ, ರೂಪ ಮಡಿವಾಳ, ಶಿವಮ್ಮ, ಜಿಲ್ಲಾ ಮಡಿವಾಳ ಸಮಾಜದ ಮಾಜಿ ಕಾರ್ಯಾಧ್ಯಕ್ಷ ಜಿ. ವೆಂಕಟೇಶ್, ಮಾಜಿ ಅಧ್ಯಕ್ಷರಾದ ಎಚ್. ಶೇಖರ್, ಜಿ. ಸೂಗಪ್ಪ, ಸಮಾಜದ ಮುಖಂಡರಾದ ಎಸ್. ಹನುಮಂತಪ್ಪ, ಜಿ. ಕೇಶವಮೂರ್ತಿ (ರಘು), ಎ. ಚಂದ್ರಶೇಖರ್, ರಾಜ್ಯ ನಿರ್ದೇಶಕರಾದ ಎ. ಪರಶುರಾಮ್, ಬಿ. ನಗರರಾಜ್, ವೈ. ಹನುಮಂತು, ದೋಬಿಘಾಟ್ ಸಮಿತಿ ಖಜಾಂಚಿ ಜೆ. ರಮೇಶ್, ಡಿ. ಮಹದೇವ್, ರಾಜ್ಯ ಯುವ ಕಾರ್ಯಾಧ್ಯಕ್ಷ ಗುಬ್ಬಲ್ ವೆಂಕಟೇಶ್, ರಮೇಶ್ ಕೊಟ್ರಪ್ಪ, ಸಣ್ಣ ಎಲ್ಲಪ್ಪ, ಎನ್. ಸುರೇಶ್, ಬಿ. ನರೇಶ್, ಹುಲಿಗೆಪ್ಪ, ಜಿ. ಶಂಕರ್, ಎಂ. ಮಹದೇವ್, ತಿಮ್ಮಪ್ಪ, ಜಿ. ತಾಯಣ್ಣ, ಬಿ. ತಾಯಣ್ಣ ಸೇರಿದಂತೆ ಸಮಾಜದ ಹಲವು ಮುಖಂಡರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾನೂನು ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ

ಕನ್ನಡ ಭಾಷಾ ಬೆಳವಣಿಗೆ ವಿದ್ಯಾರ್ಥಿಗಳ ಜವಾಬ್ದಾರಿ- ಡಾ. ಉಮಾಶ್ರೀ

ಬೆಂಗಳೂರು: ಕನ್ನಡ ಎಂದರೆ ಕೇವಲ ಭಾಷೆಯಲ್ಲ; ಅದೊಂದು ಶಕ್ತಿ, ಸಂಸ್ಕೃತಿ, ಪರಂಪರೆ- ಕನ್ನಡಿಗರ ಅಸ್ಮಿತೆಯ ಪ್ರತೀಕ; ಕನ್ನಡ ಭಾಷೆ, ಸಂಸ್ಕೃತಿ ಉಳಿಸಿ, ಬೆಳೆಸುವ ಗುರುತರ ಜವಾಬ್ದಾರಿ ಪ್ರತಿ ವಿದ್ಯಾರ್ಥಿ ಮೇಲಿದೆ ಎಂದು ಕರ್ನಾಟಕ ವಿಧಾನಪರಿಷತ್ತಿನ ಉಪಸಭಾಪತಿಗಳು ಹಾಗೂ ಹಿರಿಯ ಕಲಾವಿದರಾದ ಡಾ. ಉಮಾಶ್ರೀ ಅವರು ಹೇಳಿದ್ದಾರೆ.



ಬೆಂಗಳೂರಿನ ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾನೂನು ಕಾಲೇಜಿನ ಕನ್ನಡ ಸಂಘ ಗಂಧದ ಗುಡಿ- ಚಂದದ ಗುಡಿ ವತಿಯಿಂದ ಬುಧವಾರ ಬೆಳಿಗ್ಗೆ ನಡೆದ 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಉಪಸಭಾಪತಿಗಳು, ಕನ್ನಡ ಕೇವಲ ಪ್ರೀತಿಸುವುದಷ್ಟೇ ಅಲ್ಲ; ಅದನ್ನು ಓದುವ, ಬರೆಯುವ, ಮಾತನಾಡುವ ಮೂಲಕ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಸಂಕಲ್ಪವನ್ನು ಪ್ರತಿಯೊಬ್ಬರು ಮಾಡಬೇಕು ಎಂದು ಹೇಳಿದರು.

ಪ್ರತಿಯೊಬ್ಬರೂ ಡಾ. ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿಗಳಲ್ಲಿ ಭಾಷೆಯ ಜೊತೆಗೆ ಪ್ರಜಾಪ್ರಭುತ್ವದ ಆಶಯಗಳು, ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಿಕ ಮೌಲ್ಯಗಳು ಅವಶ್ಯಕ. ಅದರಲ್ಲೂ ಕಾನೂನು ವಿದ್ಯಾರ್ಥಿಗಳಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು, ಹೋರಾಟ ಮತ್ತು ಜ್ಞಾನ ಪ್ರತಿಯೊಬ್ಬರಿಗೂ ದಾರಿದೀಪ. ಪ್ರತಿಯೊಬ್ಬರೂ ಅಂಬೇಡ್ಕರ್ ಅವರಂತೆ ಆಗುವುದು ಎಂದರೆ ಅವರ ಉನ್ನತ ಆದರ್ಶಗಳು, ಶಿಕ್ಷಣದ ಮೇಲಿನ ಅಚಲ ನಂಬಿಕೆ ಮತ್ತು ಸಾಮಾಜಿಕ ನ್ಯಾಯದ ಹೋರಾಟವನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಡಾ. ಉಮಾಶ್ರೀ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಉಪಸಭಾಪತಿ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ಎಸ್. ಇಂದಿರಣಿ, ಕಾಲೇಜಿನ ಉಪನ್ಯಾಸಕರು ಹಾಗೂ ಕನ್ನಡ ಸಂಘದ ಸಂಯೋಜಕರಾದ ಎಸ್. ನಳಿನಾ, ಕನ್ನಡ ಸಂಘದ ಕಾರ್ಯದರ್ಶಿಯಾದ ಕಾನೂನು ವಿದ್ಯಾರ್ಥಿನಿ ಚಂದನಾ

ಮೂರನೇಯ ಪುಟಕ್ಕೆ

12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ:ಸಮ್ಮೇಳನದ ಅಮಂತ್ರಣ ಪತ್ರಿಕೆ ಬಿಡುಗಡೆ

ರಾಯಚೂರು, ನ.04-ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ದಿ.14 ಮತ್ತು 15 ರಂದು ನಗರದ ಪಂ. ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಮಾಜಿ ಸಚಿವರು ಎನ್.ಎಸ್.ಬೋಸರಾಜ ಹೇಳಿದರು.



ಅವರಿಂದು ನಗರದ ಕನ್ನಡ ಭವನದಲ್ಲಿ ಸಮ್ಮೇಳನದ ಅಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿ, ಹಿರಿಯ ಸಾಹಿತಿ ರಾಮಣ್ಣ ಹವಳ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ದಿ.15ರಂದು ಬೆಳಿಗ್ಗೆ 7:30ಕ್ಕೆ ಧ್ವಜಾರೋಹಣವನ್ನು ಸ್ವಾಗತ ಸಮಿತಿ ಅಧ್ಯಕ್ಷರು ಮಾಡಲಿದ್ದಾರೆ.

ಪರಿಷತ್ ಧ್ವಜ ರೋಹಣವನ್ನು ಕ.ಸಾ.ಪ.ಅಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ ನೇರವೇರಿಸಲಿದ್ದಾರೆ.ಕನ್ನಡ ಧ್ವಜ ರೋಹಣವನ್ನು ತಾ.ಕ.ಸಾ.ಪ.ಅಧ್ಯಕ್ಷ ಡಾ. ಬಿ. ವಿಜಯ ರಾಜೇಂದ್ರ, ಮಾಡಲಿದ್ದಾರೆ.ನಿರ್ವಹಣೆ ದಂಡಪ್ಪ ಬಿರಾದಾರ.ಸ್ವಾಗತ ಅಕ್ಕಮಹಾದೇವಿ ಉಪ್ಪಿನ್,ವಸಂತಕುಮಾರ ವಂದನಾರ್ಪಣೆ ಮಾಡಲಿದ್ದಾರೆಂದರು.

ಬೆಳಿಗ್ಗೆ 8:30 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮಹಿಳಾ ಸಮಾಜದಿಂದ ರಂಗಮಂದಿರದವರೆಗೆ ನಡೆಯಲಿದೆ.ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಶ್ರೀಮತಿ ಎಸ್.ಪೂವಿತಾ, , ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜುಬಿನ್ ಮೋಹಪಾತ್ರ ಆಯುಕ್ತರು, ರಾಯಚೂರು ಮಹಾನಗರ ಪಾಲಿಕೆ ರಾಜಶೇಖರ ರಾಮಸ್ವಾಮಿ,ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ ರವೀಂದ್ರ ಜಲ್ದಾರ್, ಮುಖಂಡರು,ಅಮರೇಗೌಡ ಹಂಚಿನಾಳ, ಮುಖಂಡರು, ಅಮರೇಶ ಹಸಮಕಲ್, ಕಲಾವಿದರು, ವಿನೋದ ರೆಡ್ಡಿ, ಅಧ್ಯಕ್ಷರು, ಕರಾವೇ (ನಾ.ಗೌ.ಬ), ಎಂ. ವಿರೂಪಾಕ್ಷಿ, ಮುಖಂಡರು,ಡಾ.ಹಂಪಣ್ಣ ಸಜ್ಜನ, ಸಹಾಯಕ ಆಯುಕ್ತರು,ಶಾಂತವೀರ ಈ., ಪೊಲೀಸ್ ಉಪಾಧೀಕ್ಷಕರು, ಸುರೇಶ್ ವರ್ಮಾ, ತಹಸೀಲ್ದಾರರು,ಜಿ. ಶಿವಮೂರ್ತಿ, ಮುಖಂಡರು ರುದ್ರಪ್ಪ ಅಂಗಡಿ, ಮುಖಂಡರು, ಕೆ.ಜಿ.ವಿರೇಶ ಮುಖಂಡರು ಆಗಮಿಸಲಿದ್ದಾರೆ.ಉದ್ಘಾಟನಾ ಸಮಾರಂಭ ಬೆಳಿಗ್ಗೆ : 10.30ಕ್ಕೆ ನಡೆಯಲಿದ್ದು, ಉದ್ಘಾಟನೆಯನ್ನು ಡಾ. ಪುರುಷೋತ್ತಮ ಬಿಳಿಮಲೆ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೆರವೇರಿಸಲಿದ್ದಾರೆ.

ಸಮ್ಮೇಳನ ಸ್ವಾಗತ ಸಮಿತಿ ಗೌರಾವಧ್ಯಕ್ಷರು ಹಾಗೂ ಸಣ್ಣ ನೀರಾಮ ವಿಜ್ಞಾನ ಮತ್ತು ತಂತ್ರಸ್ಥಾನ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯ್ ಧರ್ಮಸಿಂಗ್ , . ರಾಯಚೂರು ನಗರ ಹಾಗೂ ಕಾರ್ಯಾಧ್ಯಕ್ಷರು ಸಮ್ಮೇಳನ ಸ್ವಾಗತ ಸಮಿತಿ ಹಾಗೂ

ಶಾಸಕರು ಡಾ.ಎಸ್.ಶಿವರಾಜ ಪಾಟೀಲ್ ಆಗಮಿಸಲಿದ್ದಾರೆ.

ಸ್ಮರಣ ಸಂಚಿಕೆ ಬಿಡುಗಡೆಯನ್ನು ಪ್ರೊ.ಶಿವಾನಂದ

ಮೂರನೇಯ ಪುಟಕ್ಕೆ



ಜ್ಞಾನೇಶ ಕುಮಾರ ರಾಜೀನಾಮೆ ಆಗ್ರಹಿಸಿ ಇಂಡಿಯಾ ಮೈತ್ರಿಕೂಟ ಹೋರಾಟಕ್ಕೆ ಬೆಂಬಲ

ರಾಯಚೂರು, ನ. 04-ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಹೆಸರಿನಲ್ಲಿ ಕೋಟ್ಯಂತರ ಮತದಾರ ಹೆಸರು ಡಿಲೀಟ್ ಮಾಡಿದ ಚುನಾವಣೆ ಆಯುಕ್ತರು ಜ್ಞಾನೇಶ ಕುಮಾರ ರಾಜೀನಾಮೆ ಆಗ್ರಹಿಸಿ ಇಂಡಿಯಾ ಮೈತ್ರಿಕೂಟದ ನೇತೃತ್ವದಲ್ಲಿ ನಡೆಯುವ ಬೃಹತ್ ಪ್ರತಿಭಟನೆಗೆ ಬೆಂಬಲ ಸೂಚಿಸಲಾಗುವುದು ಎಂದು ಎಸ್ ಐ ಆರ್ ವಿರೋಧಿ ಜಾತ್ಯತೀತ ಪಕ್ಷ ಹಾಗೂ ಜನಪರ ಸಂಘಟನೆಗಳ ಒಕ್ಕೂಟದ ಮುಖಂಡರು ಮಾರೆಪ್ಪ ಹರವಿ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಎಸ್ ಐ ಆರ್ ಅಂತಿಮ ಪಟ್ಟಿ ಬಿಡುಗಡೆಯಲ್ಲಿ ರಾಜ್ಯದಲ್ಲಿ ಸುಮಾರು 1 ಕೋಟಿ ಅಧಿಕ ಮತದಾರ ಹೆಸರು ಡಿಲೀಟ್ ಮಾಡಲಾಗಿದೆ.ಎಸ್ ಐ ಆರ್ ಹೆಸರಲ್ಲಿ ಸಾಂವಿಧಾನಿಕ ಮತದಾನದ ಹಕ್ಕನ್ನು ಕಸಿದುಕೊಂಡಿದೆ ಎಂದು ಆರೋಪಿಸಿದರು. ಮತದಾರರು ಸ್ಥಳಾಂತರ ಆಗದಿದ್ದರೂ ಸ್ಥಳಾಂತರ ಎಂದು ನಮೂದಿಸಲಾಗಿದೆ ಎಂದರು. ಜೀವಂತವಾಗಿದ್ದರೂ ಮೃತಪಟ್ಟಿದ್ದಾರೆಂದು ಹೆಸರನ್ನು ಡಿಲೀಟ್ ಮಾಡಲಾಗಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿಷಯದಲ್ಲಿ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ ಕುಮಾರ್ ಅವರು ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದಾರೆ ಎಂದು ಆರೋಪಿಸಿದರು.

ಮೂರನೇಯ ಪುಟಕ್ಕೆ

ಪ್ರಜಾಪ್ರಭುತ್ವ ವಿರೋಧಿ ಎಸ್‌ಐಆರ್ ರದ್ದುಗೊಳಿಸಲಿ : ಎಂ.ಡಿ ನಿರ್ಝಾಮುದ್ದಿನ್



ಬೀದರ್

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ವಿರುದ್ಧವಾಗಿದೆ. ಇದರ ಹೆಸರಿನಲ್ಲಿ ಅರ್ಹ ಮತದಾರರನ್ನು ಮತದಾನದ ಹಕ್ಕಿನಿಂದ ವಂಚಿಸಲಾಗುತ್ತಿದೆ ಎಂದು ಆರೋಪಿಸಿದ ಎದ್ದೇಳು ಕರ್ನಾಟಕ ಸಂಘಟನೆಯ ಸಲಹಾ ಮಂಡಳಿ ಸದಸ್ಯ ಎಂ.ಡಿ ನಿರಝಾಮುದ್ದಿನ್ ಅವರು, ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿದರು. ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆಯ ವಿರುದ್ಧ ನ. 5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಇಂಡಿಯಾ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿರುವ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದಲ್ಲಿ ಜನರು ತಮ್ಮ ಮತದಾನದ ಹಕ್ಕಿನ ಮೂಲಕ ಸರ್ಕಾರವನ್ನು ಆಯ್ಕೆ ಮಾಡುತ್ತಾರೆ. ಆದರೆ, ಪ್ರಸ್ತುತ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ಸರ್ಕಾರವೇ ತನಗೆ ಬೇಕಾದ ಮತದಾರರನ್ನು ಆಯ್ಕೆ ಮಾಡಿಕೊಳ್ಳುವಂತಾಗಿದೆ. ಇದು ಪ್ರಜಾಪ್ರಭುತ್ವದ ತತ್ವಗಳಿಗೆ ವಿರುದ್ಧವಾಗಿದೆ ಎಂದು ಹೇಳಿದರು.

ಮತದಾರರ ಪಟ್ಟಿ ಪರಿಷ್ಕರಣೆಯಿಂದ ದೇಶದ ವಿವಿಧ ರಾಜ್ಯಗಳಲ್ಲಿ ಲಕ್ಷಾಂತರ ಅರ್ಹ ಮತದಾರರ ಹೆಸರುಗಳು ಕೈಬಿಟ್ಟಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಜನರು, ವೃದ್ಧರು ಹಾಗೂ ಅನಕ್ಷರಸ್ಥರು ಹೆಚ್ಚಿನ ತೊಂದರೆಗೆ ಒಳಗಾಗುತ್ತಿದ್ದಾರೆ. ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದು ಹೇಳಿದರು.

ಸಲಹಾ ಮಂಡಳಿ ಗೌರವಾಧ್ಯಕ್ಷ ಡಾ.ಮಕ್ಸೂದ್ ಚಂದಾ ಅವರು ಮಾತನಾಡಿ, ಬೀದರ್ ಜಿಲ್ಲೆಯಲ್ಲಿ ಸುಮಾರು 75 ಸಾವಿರ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಯಾರ ಹೆಸರುಗಳನ್ನು ಯಾವ ಕಾರಣಕ್ಕೆ ತೆಗೆದುಹಾಕಲಾಗಿದೆ ಎಂಬುದನ್ನು ಜಿಲ್ಲಾಡಳಿತ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಎಂಬುದನ್ನು ತಿಳಿದುಕೊಳ್ಳಲು ಸಾರ್ವಜನಿಕರಿಗೆ ಸಮರ್ಪಕ ಮಾಹಿತಿ ದೊರೆಯುತ್ತಿಲ್ಲ. ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರ ಪಟ್ಟಿ ಹಾಗೂ ಕೈಬಿಟ್ಟವರ ಹೆಸರುಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬೇಕು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾಜಿಕ ಪರಿಶೋಧನೆ ನಡೆಸಿ ಅನ್ಯಾಯಕ್ಕೊಳಗಾದ ಮತದಾರರಿಗೆ ನ್ಯಾಯ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಸಲಹಾ ಮಂಡಳಿ ಸದಸ್ಯ ವಿಠಲದಾಸ್ ಪ್ಯಾಗೆ ಅವರು ಮಾತನಾಡಿ, ಮತದಾರರ ಹೆಸರು ಸೇರ್ಪಡೆಗೆ ಬಳಸುವ ನಮೂನೆ-6, ಹೆಸರು ತೆಗೆದುಹಾಕುವಿಕೆಗೆ ಸಂಬಂಧಿಸಿದ ನಮೂನೆ-7 ಹಾಗೂ ಮತದಾರರ ವಿವರಗಳ ತಿದ್ದುಪಡಿಗೆ ಬಳಸುವ ನಮೂನೆ8ರ ದುರ್ಬಳಕೆ ನಡೆಯುತ್ತಿದೆ. ಬೀದ್ರ್, ಭಾಲ್ಕಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ನೂರಾರು ನಮೂನೆ-7 ಅರ್ಜಿಗಳನ್ನು ಸಲ್ಲಿಸಿ ಮತದಾರರ ಹೆಸರುಗಳನ್ನು ತೆಗೆದುಹಾಕಲು ಯತ್ನಿಸಿರುವ ಆರೋಪಗಳಿವೆ. ಇಂತಹ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘಟನೆಯ ಸಂಚಾಲಕ ಓಂಪ್ರಕಾಶ್ ರೊಟ್ಟೆ, ದೇವಿದಾಸ್ ತುಮಕುಂಟೆ, ಸಂಘಟನೆಯ ಸದಸ್ಯರಾದ ಸಂತೋಷ್ ಜೋಳದಾಬಕೆ, ಮಚೆಂದ್ರ ವಾಘಮಾರೆ ಉಪಸ್ಥಿತರಿದ್ದರು.

ಕಲ್ಲೂರ್ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



ಹುಮನಾಬಾದ್ :

ತಾಲೂಕಿನ ಕಲ್ಲೂರ್ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಗ್ರಾಮದ ಕೋಳಿ ಸಮಾಜದ ವತಿಯಿಂದ ಸೋಮವಾರ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಸಂತೋಷ್ ಪಾಟೀಲ್ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಲ್ಲೂರ್ ಗ್ರಾಮದ ಅಭಿವೃದ್ಧಿಗೆ ಶಾಸಕ ಸಿದ್ದು ಪಾಟೀಲ್ ಸಾಕಷ್ಟು ಅನುದಾನ ನೀಡುತ್ತಿದ್ದು, ಹುಮನಾಬಾದ್-ಕಲ್ಲೂರ್ ರಸ್ತೆ ಕಾಮಗಾರಿ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಗೊಂಡ, ದಲಿತ, ಮಾದಿಗ ಸಮುದಾಯ ಭವನ ನಿರ್ಮಾಣಕ್ಕೆ ಈಗಾಗಲೇ ಅನುದಾನ ನೀಡಲಾಗಿದ್ದು, ಮುಂದಿನ ವರ್ಷದೊಳಗೆ ಕೋಳಿ ಸಮಾಜಕ್ಕೂ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರಿಗೆ ಒತ್ತಾಯ ಮಾಡುವುದಾಗಿ ಅವರು ಭರವಸೆ ನೀಡಿದರು.

ಪ್ರತಿವರ್ಷ ಈ ಜಯಂತಿಯನ್ನು ಆಚರಿಸುತ್ತಿರುವುದು ಶ್ಲಾಘನೀಯವಾಗಿದ್ದು, ಮುಂದಿನ ವರ್ಷ ಇನ್ನೂ ಅದ್ದೂರಿಯಾಗಿ ಆಚರಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಬೇಕು ಎಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಹಿರೇಮಠದ ಮೃತ್ಯುಂಜಯ ಶಿವಾಚಾರ್ಯರು, ಉಮೇಶ್ ನಾಗುರೆ, ನಾಗಭೂಷಣ್ ಸಂಗಮ್, ಅನಿಲ್ ಕೊನೇರಿ, ಸಾಯಿಬಣ್ಣ ಚೌಡಿಕೆ, ಬಸಪ್ಪ ನಾಗುರೆ, ಶಾಲಿವನ್ ಬುನೇರಿ, ಸಚಿನ್ ದಾಡಗಿ, ಮಲ್ಲು ಸ್ವಾಮಿ, ಕರಿಬಸಪ್ಪ ಭೀಮಶೆಟ್ಟಿ, ಅರು ಣ್ ಬಾವಗಿ, ಅಶೋಕ್ ಹಣಕು ಣಿ, ದಯಾನಂದ ಮೇತ್ರಿ ಹಾಗೂ ಪಪ್ಪು ರಾಜ್ ಚತುರೆ ಸೇರಿ ಹಲವರು ಉಪಸ್ಥಿತರಿದ್ದರು.

ಧಮ್ಮ ಜನಜಾಗೃತಿ ಯಾತ್ರೆ ಸಮಾರೋಪ; ಸನ್ನತಿಯಲ್ಲಿ ಬೌದ್ಧ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಆಗ್ರಹ



ಕಲಬುರಗಿ:

ದ್ವೇಶದಿಂದ ವೈರತ್ವ ನಾಶವಾಗುವುದಿಲ್ಲ, ಪ್ರೀತಿಯಿಂದ ಮಾತ್ರ ವೈರತ್ವ ನಾಶವಾಗುವುದು ಎಂದು ಅಂತಾರಾಷ್ಟ್ರೀಯ ಬೌದ್ಧ ಯುವ ಸಂಘಟನೆಯ ಸಂಸ್ಥಾಪಕರಾದ ಪೂಜ್ಯ ಬಂತೆ ಶಾಕು ಬೋಧಿಧಮ್ಮ ಹೇಳಿದರು.

ಅಂತಾರಾಷ್ಟ್ರೀಯ ಬೌದ್ಧ ಯುವ ಸಂಘಟನೆ ಭಾರತ, ಗ್ಲೋಬಲ್ ಡಾ.ಅಂಬೇಡ್ಕರ್ ಬೌದ್ಧ ಮಿಷನ್ ಯುಎಸ್‌ಎ ಹಾಗೂ ಅಖಿಲ ಭಾರತ ಡಾ.ಅಂಬೇಡ್ಕರ್ ಭಿಕ್ಕು ಸಂಘ ಮತ್ತು ಬೌದ್ಧ ಮಹಾಸ್ತೂಪ ಅಭಿವೃದ್ಧಿ ಸಂರಕ್ಷಣಾ ಸಂಸ್ಥೆ ಸನ್ನತಿ (ಕನಗನಹಳ್ಳಿ) ಆಶ್ರಯದಲ್ಲಿ ರವಿವಾರ ಚಿತ್ತಾಪುರ ತಾಲೂಕಿನ ಸನ್ನತಿಯಲ್ಲಿ ಜರುಗಿದ ಕರ್ನಾಟಕ ಧಮ್ಮಾ ಜನಜಾಗೃತಿ ಯಾತ್ರೆಯ ಸಂಪನ್ನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಾನಸಿಕ ಗುಲಾಮಗಿರಿ ಎಂಬುದು ಮನುಷ್ಯನ ಸ್ವತಂತ್ರ ಆಲೋಚನೆ, ವಿವೇಚನೆ ಮತ್ತು ಪ್ರಶ್ನಿಸುವ ಹಕ್ಕನ್ನು ಕಸಿದುಕೊಂಡು, ಅಂಧ'ಶ್ರದ್ಧೆಯೊಂದಿಗೆ ವ್ಯವಸ್ಥೆಯೊಂದಕ್ಕೆ ಕುರುಡಾಗಿ ಶರಣಾಗುವಂತೆ ಮಾಡುವ ಸ್ಥಿತಿಯಾಗಿದೆ. ಬೌದ್ಧ ಧರ್ಮದ ಮೂಲ ತತ್ವಗಳ ಪ್ರಕಾರ, ಇಂತಹ ಮಾನಸಿಕ ಗುಲಾಮಗಿರಿಗೆ ಬುದ್ಧನ ವೈಚಾರಿಕತೆ ಮಾತ್ರ ಚಿಕಿತ್ಸೆ ನೀಡಬಲ್ಲದು ಎಂದು ಹೇಳಿದರು.

26 ದಿನಗಳ ಕಾಲ ರಾಜ್ಯಾದ್ಯಂತ ಯಾತ್ರೆ ನಡೆದಿದ್ದು, ಜನರಿಂದ ಅದ್ಭುತ ಬೆಂಬಲ ವ್ಯಕ್ತವಾಗಿದೆ. ಬೌದ್ಧ ಧರ್ಮದ ಅನುಯಾಯಿಗಳು ಸನಾತನ ಧರ್ಮದ ಸಂಕೋಲೆಗಳಿಂದ ಮುಕ್ತರಾಗಲು ಹೆಣಗಾಡುತ್ತಿದ್ದಾರೆ. ದೈನಂದಿನ ಜೀವನದಲ್ಲಿ ಸನಾತನ ಧರ್ಮದ ಅಂಧಶ್ರದ್ದೆಗಳು ನಮ್ಮನ್ನು ಮುನ್ನಡೆಸುತ್ತಿವೆ. ಮಾನಸಿಕ ಗುಲಾಮಗಿರಿ ನಮ್ಮನ್ನು ಆಳಲು ನಾವು ಯಾವುದೇ ಕಾರಣಕ್ಕೂ ಬಿಡಬಾರದು ಎಂದರು.

ಸನ್ನತಿಯಲ್ಲಿ ಬೌದ್ಧ ವಿಶ್ವವಿದ್ಯಾಲಯ, ಸಂಶೋಧನೆ ಕೇಂದ್ರ ನಿರ್ಮಿಸಿ ಇಡೀ ಪ್ರದೇಶವನ್ನು ಜಗತ್ತು ಆಕರ್ಷಿಸುವಂತೆ ಮಾಡಬೇಕು ಎಂದು ರಾಜ್ಯ ಸರಕಾರವನ್ನು ಒತ್ತಾಯಿಸಿದರು.

ಪ್ರಮುಖರಾದ ಸುರೇಶ ಹಾದಿಮನಿ, ಮರಿಯಪ್ಪ ಚಟ್ಟರಕರ, ಅರುಣಕುಮಾರ, ರಾಹುಲ್ ಹಳಿಮನಿ, ಸಂದೀಪ ಕಟ್ಟಿ, ಮಲ್ಲಪ್ಪ ಹೊಸ್ಮನಿ, ಬಸವರಾಜ ಬೆಣ್ಣೂರ, ಸೂರ್ಯಕಾಂತ ರದ್ದೆವಾಡಿ, ಶರಣಬಸ್ಸು ಶಿರೂರಕರ, ಶ್ರೀಕಾಂತ ಶಿಂಧೆ, ಸಾಬಣ್ಣ ಬನ್ನಟ್ಟಿ, ನ್ಯಾಯವಾದಿ ಸಂದೀಪ ಕುಮಾರಸಿಂಗ್, ವಿನಯ ಬಂಬೋಲೆ, ಗುರುಪಾದ ದೊಡ್ಡಮನಿ, ಆನಂದ ಟೈಗರ, ಮಲ್ಲಿಕಾರ್ಜುನ ಬೆಣ್ಣೂರ, ಮರಿಯಪ್ಪ ಬುಕ್ಕಾ, ಮಾರುತಿ ಕಂಠಿ, ಸುರೇಶ ನಿಂಬಾಳಕರ, ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಉಪಾಸಕ, ಉಪಾಸಕಿಯರು ಪಾಲ್ಗೊಂಡಿದ್ದರು.

ಸುರೇಶ ಹಾದಿಮನಿ, ಮಲ್ಲಪ್ಪ ಹೊಸ್ಮನಿ ಇತರರು ದ್ವಜಾರೋಹಣ ನೇರವೇರಿಸಿದರು. ನೀಲಕಂಠ ಬಡಿಗೇರ, ಮಾರುತಿ ಕಂಠಿ ಪ್ರಾರ್ಥಿಸಿ ದರು, ಭಾಗಪ್ಪ ಯಾದಗಿರಿ ರಾಜು ಸಂಕಾ ನಿರೂಪಿಸಿ, ವಂದಿಸಿದರು.

ಔರಾದ್ ಕುಡಿಯುವ ನೀರಿಗಾಗಿ 2.5 ಕೋಟಿ ಅನುದಾನಕ್ಕೆ ಶಾಸಕ ಪ್ರಭು ಚವ್ಹಾಣ ಆಗ್ರಹ



ಔರಾದ್ :

ಪಟ್ಟಣದಲ್ಲಿ ತಲೆದೋರಿರುವ ತೀವ್ರ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ತಕ್ಷಣವೇ 2.5 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಶಾಸಕ ಪ್ರಭು ಚವ್ಹಾಣ ಅವರು ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರನ್ನು ಒತ್ತಾಯಿಸಿದರು.

ತಾಲೂಕಿನ ತೇಗಂಪೂರ್ ಸಣ್ಣ ನೀರಾವರಿ ಇಲಾಖೆಯ ಕೆರೆಗೆ ಸಚಿವ ಈಶ್ವರ್ ಖಂಡ್ರೆ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಮನವಿ ಪತ್ರ ಸಲ್ಲಿಸಿ, ಔರಾದ್ ಪಟ್ಟಣಕ್ಕೆ ಈ ಹಿಂದೆ ತೇಗಂಪೂರ್ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿತ್ತು. ಆದರೆ, ಹಾಲಹಳ್ಳಿಯಿಂದ ನೀರು ಪೂರೈಕೆ ಆರಂಭವಾದ ನಂತರ ತೇಗಂಪೂರ್ ಕೆರೆ ನೀರು ಸರಬರಾಜು ಯೋಜನೆ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಮೋಟಾರ್‌ಗಳು, ಪೈಪ್‌ಲೈನ್ ಸೇರಿದಂತೆ ಸಂಪೂರ್ಣ ವ್ಯವಸ್ಥೆ ಹಾಳಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಮಾಂಜ್ರಾ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ಅಲ್ಲಿಂದ ಪಟ್ಟಣಕ್ಕೆ ನೀರು ಸರಬರಾಜು ಸ್ಥಗಿತಗೊಂಡಿದೆ. ಇದರಿಂದಾಗಿ ಜನರು ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಿಸುವಂತಾಗಿದೆ. ಔರಾದ್ ಪಟ್ಟಣದ ಜನಸಂಖ್ಯೆಗೆ ಅನುಗುಣವಾಗಿ ಸಮರ್ಪಕ ನೀರು ಪೂರೈಸಲು ತೇಗಂಪೂರ್ ಕೆರೆಯಲ್ಲಿ ಅಗತ್ಯ ಸಾಮರ್ಥ್ಯದ ಮೋಟಾರ್‌ಗಳನ್ನು ಅಳವಡಿಸಿ, ಔರಾದ್ ಪಟ್ಟಣದವರೆಗೆ ಹೊಸ ಪೈಪ್‌ಲೈನ್ ವ್ಯವಸ್ಥೆ ಕಲ್ಪಿಸಬೇಕಿದೆ. ಈ ಕಾಮಗಾರಿಗಳಿಗೆ ಅಂದಾಜು 2.5 ಕೋಟಿ ರೂ. ಅನುದಾನ ಅಗತ್ಯವಿದ್ದು, ಕೂಡಲೇ ಅನುದಾನ ಒದಗಿಸುವಂತೆ ಅವರು ಮನವಿ ಮಾಡಿದರು. ಶಾಸಕರ ಮನವಿಗೆ ಸಕಾರಾತ್ಮಕ ವಾಗಿ ಸ್ಪಂದಿಸಿದ ಸಚಿವರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಸಲ್ಲಿಕೆಯಾಗಿರುವ 30 ಲಕ್ಷ ರೂ. ಅನುದಾನದ ಪ್ರಸ್ತಾವನೆಗೆ ಮಂಜೂರಾತಿ ನೀಡುವಂತೆ ಮತ್ತು ತಮ್ಮ ಇಲಾಖೆಯಿಂದ 50 ಲಕ್ಷ ರೂ. ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮೌಖಿಕ ನಿರ್ದೇಶನ ನೀಡಿದರು. ಅಲ್ಲದೆ, ಔರಾದ್ ಪಟ್ಟಣದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುಂದಿನ ಮೂರು ದಿನಗಳೊಳಗಾಗಿ ತಾತ್ಕಾಲಿಕ ಪರಿಹಾರ ಕ್ರಮ ಕೈಗೊಂಡು ನೀರು ಪೂರೈಕೆ ಮಾಡುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ಉಪಸ್ಥಿತರಿದ್ದರು.

ಬೀದರ್ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಸ್ತೆ ತಡೆದು ಪ್ರತಿಭಟನೆ



ಭಾಲ್ಕಿ :

ತಾಲೂಕಿನ ಉಚ್ಚಾ ಗ್ರಾಮದ ಬಳಿ ರೈತರು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸೋಮವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಭಾಲ್ಕಿ-ಬಸವಕಲ್ಯಾಣ ಮುಖ್ಯ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರತಿಭಟನಾಕಾರರು, ರೈತರಿಗೆ ಸುಮಾರು ಏಳು ಗಂಟೆ ವಿದ್ಯುತ್ ನೀಡಬೇಕು. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು. ಸಾರ್ವಜನಿಕರ ಸುಗಮ ಓಡಾಟಕ್ಕಾಗಿ ಬೀದಿ ದೀಪಗಳ ವ್ಯವಸ್ಥೆ ಮಾಡಬೇಕು. ಚರಂಡಿ ನೀರು ಸುಗಮವಾಗಿ ಹರಿದು ಹೋಗಲು ಚರಂಡಿಗಳನ್ನು ನಿರ್ಮಿಸಬೇಕು. ಸದ್ಯ ಇರುವ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಸೇರಿದಂತೆ ಇತರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿದರು. ಭಾಲ್ಕಿಯ ತಹಶೀಲ್ದಾರ್ ಮಲ್ಲಿಕಾರ್ಜುನ್ ವಡ್ಡನಕೇರಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಿರೇಂದ್ರಸಿಂಗ್ ಠಾಕೂರ್ ಸೇರಿ ದಂತೆ ಇತರ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಮನವೊಲಿಸಿ, ಬೇಡಿಕೆಗಳ ಈಡೇರಿಕೆಯ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಮೊರಂಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಉಚ್ಚಾ, ಹಾಳಗೋರಟಾ, ಹೊನ್ನಳ್ಳಿ, ಕುಂಟೆಗಾಂವ್, ಬ್ಯಾಲಹಳ್ಳಿ (ಡಬ್ಲು) ಹಾಗೂ ಮೊರಂಬಿ ಗ್ರಾಮಗಳ ರೈತರು ಪಾಲ್ಗೊಂಡಿದ್ದರು.



ಕಲಬುರಗಿ ಅಂಗನವಾಡಿ ನೌಕರರ 10ನೇ ಜಿಲ್ಲಾ ಸಮ್ಮೇಳನ

ಕಲಬುರಗಿ:

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ಜಿಲ್ಲಾ ಸಮಿತಿ ವತಿಯಿಂದ ಅಂಗನವಾಡಿ ನೌಕರರ 10ನೇ ಕಲಬುರಗಿ ಜಿಲ್ಲಾ ಸಮ್ಮೇಳನ ನಗರದ ಕನ್ನಡ ಭವನದಲ್ಲಿ ನಡೆಯಿತು.

ಸಮ್ಮೇಳನವನ್ನು ಸಂಘದ ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮೀ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಂಗನವಾಡಿ ನೌಕರರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವರ ಹಕ್ಕುಗಳ ಕುರಿತು ಸಂಘಟಿತ ಹೋರಾಟದ ಅಗತ್ಯವನ್ನು ಒತ್ತಿಹೇಳಿದರು.

ಅಂಗನವಾಡಿ ನೌಕರರು ಮಕ್ಕಳ ಪೌಷ್ಟಿಕತೆ, ಆರೋಗ್ಯ ಮತ್ತು ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸೇವೆಗೆ ತಕ್ಕ ಗೌರವ, ಸೌಲಭ್ಯಗಳು ಹಾಗೂ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ನಿರಂತರ ಹೋರಾಟ ನಡೆಸಬೇಕಿದೆ ಎಂದು ಹೇಳಿದರು.

ಸಮ್ಮೇಳನದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಎಂ.ಬಿ. ಸಜ್ಜನ್, ಜಿಲ್ಲಾ ಕಾರ್ಯದರ್ಶಿ ಶಾಂತಾ ಘಂಟೆ, ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಗೌರಮ್ಮ ಪಾಟೀಲ, ರಾಜಮತಿ, ಶ್ರೀಮಂತ ಬಿರಾದಾರ, ಪುಷ್ಪಾ, ದೇವಮ್ಮ ಅನ್ನದಾನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಲಾರಿ ಹರಿದು 3 ವರ್ಷದ ಬಾಲಕ ಮೃತ್ಯು: ಹೆದ್ದಾರಿ ತಡೆದು ಗ್ರಾಮಸ್ಥರಿಂದ ಪ್ರತಿಭಟನೆ



ಚಿಂಚೋಳಿ:

ಕಲ್ಲೂರು ರೋಡ್ ಗ್ರಾಮದಲ್ಲಿ ಮನೆ ಮುಂದಿನ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೂರು ವರ್ಷದ ಬಾಲಕನ ಮೇಲೆ ಲಾರಿ ಹರಿದು ಬಾಲಕ ಮೃತಪಟ್ಟಿರುವ ಘಟನೆ ಶನಿವಾರ ಸಂಜೆ ಸಂಭವಿಸಿದೆ.

ಪ್ರಕಾಶ್ ಎಂಬುವವರ ಮೂರು ವರ್ಷದ ಪುತ್ರ ಓಂಕಾರ ಮೃತಪಟ್ಟ ದುರ್ದೈವಿ.

ಘಟನೆಯ ವಿವರ: ಶನಿವಾರ ಸಂಜೆ ಬಾಲಕ ಓಂಕಾರ ಮನೆ ಮುಂದಿನ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಬಂದ ಲಾರಿಯೊಂದರ ಚಕ್ರಗಳು ಬಾಲಕನ ಎರಡೂ ಕಾಲುಗಳ ಮೇಲೆ ಹರಿದಿವೆ.

ಪರಿಣಾಮ ತೀವ್ರವಾಗಿ ಗಾಯಗೊಂಡ ಬಾಲಕನನ್ನು ತಕ್ಷಣವೇ ಕಲಬುರಗಿ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ತದನಂತರ ಹೆಚ್ಚಿನ ಚಿಕಿತ್ಸೆ ಗಾಗಿ ಹೈದರಾಬಾದ್‌ಗೆ ಕರೆದೊಯ್ಯುವ ಮಾರ್ಗಮಧ್ಯೆ ಬಾಲಕ ಕೊನೆಯುಸಿರೆಳೆದಿದ್ದಾನೆ.

ಕುಡಿಯುವ ನೀರಿನ ಕಾಮಗಾರಿಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ಅಗೆದಿದ್ದ ಗುಂಡಿಯನ್ನು ಮುಚ್ಚದೆ ಹಾಗೆಯೇ ಬಿಟ್ಟು ನಿರ್ಲಕ್ಷ್ಯ ವಹಿಸಿದ್ದೇ ಈ ದುರಂತಕ್ಕೆ ನೇರ ಕಾರಣ ಎಂದು ಮೃತನ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಆರೋಪಿಸಿದ್ದಾರೆ. ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯ ಬೇಜವಾಬ್ದಾರಿತನದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಸೋಮವಾರ ರಾಷ್ಟ್ರೀಯ ಹೆದ್ದಾರಿ ತಡೆದು ಬೃಹತ್ ಪ್ರತಿಭಟನೆ ನಡೆಸಿದರು.

ರಸ್ತೆ ತಡೆಯಿಂದಾಗಿ ಕೆಲಕಾಲ ಸಂಚಾರ ವ್ಯತ್ಯಯ ಉಂಟಾಯಿತು. ಸ್ಥಳೀಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು (ಪಿಡಿಒ) ತಕ್ಷಣವೇ ವರ್ಗಾವಣೆ ಮಾಡಬೇಕು ಮತ್ತು ದುರಂತಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

2026ರಲ್ಲಿ ಅತೀ ಹೆಚ್ಚು ಸುಳ್ಳು ಹೇಳಿದ ಶಾಸಕ ಸಿದ್ದು ಪಾಟೀಲ್ : ವೀರಣ್ಣ ಪಾಟೀಲ್



ಹುಮನಾಬಾದ್ :

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಷಣ ಮಾಡುವಾಗ ಶಾಸಕ ಸಿದ್ದು ಪಾಟೀಲ್ ಅವರು ವೀರಭದ್ರೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದ ಬಗ್ಗೆ ಮಾಡಿರುವ ಆರೋಪಕ್ಕೆ ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ವೀರಭದ್ರೇಶ್ವರ ದೇವಸ್ಥಾನ ಕಮಿಟಿಯ ಅಧ್ಯಕ್ಷ ವೀರಣ್ಣ ಪಾಟೀಲ್ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದು, 2026ರಲ್ಲಿ ಅತೀ ಹೆಚ್ಚು ಸುಳ್ಳು ಹೇಳಿದ ಶಾಸಕ ಯಾರಾದರೂ ಇದ್ದರೆ ಅದು ಸಿದ್ದು ಪಾಟೀಲ್ ಅವರಾಗಿದ್ದಾರೆ ಎಂದು ಹೇಳಿದರು.


ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಸಕ ಸಿದ್ದು ಪಾಟೀಲ್ ಅವರು ಹೇಳಿರುವುದು ಶುದ್ದ ಸುಳ್ಳು. ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್‌ನವರು ದುಡ್ಡು ತೆಗೆದುಕೊಂಡಿಲ್ಲ. ಇದರ ಬಗ್ಗೆ ಬೇಕಾದರೆ ಶಾಸಕರು ತನಿಖೆ ಮಾಡಿಸಿಕೊಳ್ಳಲಿ. ಬಸವರಾಜ್ ಪಾಟೀಲ್ ಅವರ ಕನಸಿನ ಕಾಣಿಕೆಯೇ ಈ ಕಲ್ಯಾಣ ಮಂಟಪವಾಗಿದೆ. ಅದಕ್ಕೆ ಆಗಿರುವ ಎಲ್ಲಾ ಖರ್ಚು ವೆಚ್ಚದ ಮಾಹಿತಿ ಸರಕಾರದ ಬಳಿ ಇದೆ ಎಂದರು.

ಶಾಸಕರು ದುಡ್ಡು ತಿಂದಿದ್ದಾರೆ ಎಂಬ ವಿಚಾರವನ್ನು ಬಹಿರಂಗಪಡಿಸಬೇಕು. ಅದು ನಿಜವಾಗಿದ್ದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ. ದೇವಸ್ಥಾನದ ವಿಚಾರದಲ್ಲಿ ಶಾಸಕರೇ ವೀರಭದ್ರೇಶ್ವರ್ ಅಭಿವೃದ್ಧಿ ಕಾರ್ಯ ರದ್ದು ಮಾಡಲು ಸಚಿವರಿಗೆ ಪತ್ರ ನೀಡಿದ್ದಾರೆ. ವೀರಭದ್ರೇಶ್ವರ್ ಕಲ್ಯಾಣ ಮಂಟಪದ ಹಣ ತಿನ್ನುವುದು ತಾಯಿಗೆ ದ್ರೋಹ ಬಗೆದಂತೆ ಎಂದು ಹೇಳಿದರು.

ಮೀರಾಜ್ ಪಟೇಲ್, ರಾಮಚಂದ್ರ ವೀರಪ್ಪ, ಸುಭಾಷ್ ಕಲ್ಲೂರ್ ಅಂತಹ ನಾಯಕರು ಆಡಳಿತ ಮಾಡಿದ್ದಾರೆ. ಆದರೆ, ಯಾರೂ ಕೂಡ ದೇವಸ್ಥಾನದ ವಿರೋಧಕ್ಕೆ ಹೋಗಲಿಲ್ಲ. ಸಿದ್ದು ಪಾಟೀಲ್ ಅವರು ದೇವಸ್ಥಾನ ಅಭಿವೃದ್ಧಿ ನಿಲ್ಲಿಸಲು ಸಚಿವರಿಗೆ ಮನವಿ ಮಾಡಿರುವುದಕ್ಕೆ ದಾಖಲೆ ಇದೆ. ಶಾಸಕರು ಬಹಿರಂಗ ಚರ್ಚೆಗೆ ಬರಲಿ, ಅವರು ಎಷ್ಟು ವಶಕ್ಕೆ ಪಡೆದಿದ್ದು ನಾನು ಹೇಳುತ್ತೇನೆ, ನಾವು ಮಾಡಿದ್ದು ಅವರು ಹೇಳಲಿ ಎಂದು ಸವಾಲು ಹಾಕಿದರು.

ಈ ಸಂದರ್ಭದಲ್ಲಿ ಮಹೇಶ್ ಅಗಡಿ ಅವರು ಉಪಸ್ಥಿತರಿದ್ದರು.

ವಿಜಯಲಕ್ಷ್ಮಿಗೆ ಕೇಂದ್ರೀಯ ವಿವಿಯಿಂದ ಪಿಎಚ್.ಡಿ ಪದವಿ



ಕಲಬುರಗಿ:

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ವಿಜಯಲಕ್ಷ್ಮಿ ದೊಡ್ಡಮನಿ ಅವರಿಗೆ ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು. ಅವರು 'ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆಯ ದಲಿತತ್ವದ ನೆಲೆಗಳು (ಹೊನ್ನ ಕೋಗಿಲೆಯ ಆರು ಸಂಪುಟಗಳನ್ನು ಅನುಲಕ್ಷಿಸಿ)' ಎಂಬ ವಿಷಯದ ಕುರಿತು ಮಹಾಪ್ರಬಂಧ ಮಂಡಿಸಿದ್ದರು.

ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಅಪ್ಪಗೆರೆ ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಅವರು ಸಂಶೋಧನೆ ನಡೆಸಿದ್ದಾರೆ.

ಒಂದನೇಯ ಪುಟದಿಂದ

ಹಿಂದುಳಿದ ಜಾತಿಗಳಿಗೆ ಶೇ.33 ಮೀಸಲಾತಿ ನೀಡದಿರುವುದು ಅನ್ಯಾಯ :ಶ್ರೀಕಾಂತ ರಾವ್

ಸಲ್ಲಿಸಿತ್ತು. 2023ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಚಿವ ಸಂಪುಟದಲ್ಲಿ ವರದಿ ಚರ್ಚಿಸಿ, ಪರಿಶಿಷ್ಟ ಜಾತಿಗೆ ಶೇ.15, ಪರಿಶಿಷ್ಟ ಪಂಗಡಕ್ಕೆ ಶೇ.3 ಹಾಗೂ ಇತರ ಹಿಂದುಳಿದ ಜಾತಿಗಳಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ತೀರ್ಮಾನ ಕೈಗೊಂಡಿತ್ತು. ಒಟ್ಟಾರೆ ಮೀಸಲಾತಿ ಶೇ.50ರ ಮಿತಿಯೊಳಗೆ ಇರಬೇಕೆಂದು ನಿರ್ಧರಿಸಲಾಗಿತ್ತು ಎಂದು ತಿಳಿಸಿದರು.

ಆದರೆ, ಸಚಿವ ಸಂಪುಟದ ತೀರ್ಮಾನಕ್ಕೆ ವಿರುದ್ಧವಾಗಿ ಪ್ರಸ್ತುತ ಹಿಂದುಳಿದ ಜಾತಿಗಳಿಗೆ ಕಡಿಮೆ ಪ್ರಮಾಣದಲ್ಲಿ ಮೀಸಲಾತಿ ನಿಗದಿಪಡಿಸಿರುವುದು ಸಂವಿಧಾನಬದ್ಧ ಹಕ್ಕುಗಳಿಗೆ ಧಕ್ಕೆಯುಂಟು ಮಾಡಿದೆ. ಇದರಿಂದ ಹಿಂದುಳಿದ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯದಂತಾಗುವ ಅಪಾಯವಿದೆ. ಆದ್ದರಿಂದ ಮೀಸಲಾತಿ ನಿಗದಿಯಲ್ಲಿ ಪಾರದರ್ಶಕತೆ ಮತ್ತು ನ್ಯಾಯಸಮ್ಮತ ಮಾನದಂಡಗಳನ್ನು ಅನುಸರಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಕೂಡಲೇ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಆಯೋಗದ ಶಿಫಾರಸ್ಸಿನಂತೆ ಇತರ ಹಿಂದುಳಿದ ಜಾತಿಗಳಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸಿ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಹಿಂದುಳಿದ ಜಾತಿಗಳ ಸಮುದಾಯಗಳು ಚುನಾವಣೆ ಪ್ರಕ್ರಿಯೆಯನ್ನು ಬಹಿಷ್ಕರಿಸುವುದರ ಜತೆಗೆ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ

ವಿಜಯ ಕುಮಾರ್ ಹೂಗಾರ್ ಸೇರಿದಂತೆ ಇತರರು ಇದ್ದರು.

ನಾಳೆ ಜ್ಞಾನೇಶ ಕುಮಾರ ರಾಜೀನಾಮೆ ಆಗ್ರಹಿಸಿ ಇಂಡಿಯಾ ಮೈತ್ರಿಕೂಟ ಹೋರಾಟಕ್ಕೆ ಬೆಂಬಲ

ಎಸ್‌ಐಆರ್ ರದ್ದಾಗಬೇಕು, ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು, ಮುಖ್ಯ ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆ ಪ್ರಜಾಸತಾತ್ಮಕಗೊಳಿಸಬೇಕು. ಸುಪ್ರೀಂ ಕೋರ್ಟ್ ಸೂಚನೆಯ ಅನುಸಾರ ಆಯ್ಕೆ ಪ್ರಕ್ರಿಯೆ ನಡೆಸಬೇಕು. ಮುಖ್ಯ ಚುನಾವಣಾ ಆಯುಕ್ತರಿಗೆ ಶಾಶ್ವತ ವಿನಾಯಿತಿ ನೀಡಿರುವ ಕಾಯ್ದೆ ಹಿಂಪಡೆಯಬೇಕು ಎಂಬುದು ನಮ್ಮ ಪ್ರಮುಖವಾದ ವಿಚಾರ ಈ ಬೇಡಿಕೆಗಳನ್ನು ಇಟ್ಟುಕೊಂಡು ಪ್ರತಿಭಟನೆ ನಡೆಸಲಾಗುತ್ತಿದೆ. ಕೇವಲ ಪ್ರತಿಭಟನೆ ಮೂಲಕ ಜ್ಞಾನೇಶ ಕುಮಾರ ಅವರನ್ನು ರಾಜೀನಾಮೆ ಅಸಾಧ್ಯ. ಸಾರ್ವಜನಿಕ ಆಂದೋಲನ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರೆ ಅವರ ರಾಜೀನಾಮೆ ಸಾಧ್ಯ. ಎಸ್ ಐ ಆರ್ ಕುರಿತು ಸಾರ್ವಜನಿಕರಲ್ಲಿ ಮಾಹಿತಿ ಕೊರತೆಯಿದೆ. ಆಂದೋಲನ ಮೂಲಕ ಜಾಗೃತಿ ಮೂಡಿಸಬೇಕು ಎಂದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ನೀಡಿದ ಮತದಾನದ ಹಕ್ಕು ಉಳಿಸಲು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು.ಮುಂಬರುವ ಸ್ಥಳೀಯ ಚುನಾವಣೆಯಲ್ಲಿ ಎಸ್ ಐ ಆರ್ ಅನ್ನು ಪರಿಗಣಿಸಬಾರದು ಎಂದು ಒತ್ತಾಯಿಸಿದರು.

ಎಸ್ ಐ ಆರ್ ದೋಷಪೂರಿತದಿಂದ ಕೂಡಿದೆ. ಸ್ಥಳೀಯ ಚುನಾವಣೆಯಲ್ಲಿ ಎಸ್ ಐ ಆರ್ ಅನ್ನು ಪರಿಗಣಿಸಬಾರದು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಚಾಮರಾಸ ಮಾಲಿಪಾಟೀಲ್, ಎಂ ಆರ್ ಭೇರಿ, ಸೇರಿದಂತೆ ಉಪಸ್ಥಿತರಿದ್ದರು.

ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾನೂನು ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ

ಕನ್ನಡ ಭಾಷಾ ಬೆಳವಣಿಗೆ ವಿದ್ಯಾರ್ಥಿಗಳ ಜವಾಬ್ದಾರಿ- ಉಮಾಶ್ರೀ

ಸೇರಿದಂತೆ ಕಾಲೇಜು ಆಡಳಿತ ಮಂಡಳಿ ಸದಸ್ಯರು, ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಉಪಸಭಾಪತಿ ಅವರನ್ನು ಕಾಲೇಜಿನ ಮಹಿಳಾ ಡೊಳ್ಳು ಕುಣಿತದ ತಂಡ, ಎನ್ ಸಿಸಿ ಕೆಡೆಟ್ ಗಳು ಅತ್ಯಂತ ಆದರದಿಂದ ಬರಮಾಡಿಕೊಂಡರು.

12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನದ ಅಮಂತ್ರಣ ಪತ್ರಿಕೆ ಬಿಡುಗಡೆ

ಕೆಳಗಿನವುನಿ ಕುಲಪತಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು ಮಾಡಲಿದ್ದಾರೆ.ಸ್ವಾಗತ/ಪ್ರಾಸ್ತಾವಿಕ ನುಡಿಗಳನ್ನು ರಂಗಣ್ಣ ಪಾಟೀಲ್ ಅಳ್ಳುಂಡಿ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು ನುಡಿಯಲಿದ್ದಾರೆ.

'ಹಿಂದಿನ ಸಮ್ಮೇಳನ ಅಧ್ಯಕ್ಷರ ನುಡಿಯನ್ನು ವೀರಹನುಮಾನ ಸಾಹಿತಿಗಳು ನುಡಿಯಲಿದ್ದಾರೆ.

ಧ್ವಜ ಹಸ್ತಾಂತರವನ್ನು ರಾಯಚೂರು ಜಿಲ್ಲಾ 11ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು ಮಾಡಲಿದ್ದಾರೆ.

ಸಮ್ಮೇಳನ ಅಧ್ಯಕ್ಷರ ನುಡಿಯನ್ನು ರಾಮಣ್ಣ ಹವಳೆ ಹಿರಿಯ ಸಾಹಿತಿಗಳು, ಶಿಕ್ಷಣ ತಜ್ಞರು ನುಡಿಯಲಿದ್ದಾರೆ.

ಚಿತ್ರಕಲಾ ಪ್ರದರ್ಶನ ಉದ್ಘಾಟನೆಯನ್ನು ಸಂಸದ ಜಿ.ಕುಮಾರ ನಾಯಕ ಅವರು ಮಾಡಲಿದ್ದಾರೆ.

ವಾಣಿಜ್ಯ ಮಳಿಗೆಗಳ ಉದ್ಘಾಟನೆಯನ್ನು ಗ್ರಾಮೀಣ ಶಾಸಕರು ಬಸನಗೌಡ ದದ್ದಲ್ ಅವರು ಮಾಡಲಿದ್ದಾರೆ.

ಪುಸ್ತಕ ಮಳಿಗೆಗಳ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯ ಎ.ವಸಂತ ಕುಮಾರ ಅವರು ನೆರವೇರಿಸಲಿದ್ದಾರೆ.ವಿಧಾನ ಪರಿಷತ್ ಸದಸ್ಯರು,ಆದಿ ಅಮಾತೆಪ್ಪನವರ ಕೃತಿಗಳ ಬಿಡುಗಡೆ ಕರೆಮ್ಮ ಜಿ. ನಾಯಕ್ ಶಾಸಕರು, ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಂಪನಗೌಡ ಬಾದರ್ಲಿ ಶಾಸಕರು, ಸಿಂಧನೂರು, ಹಂಪಯ್ಯ ನಾಯಕ್ ಶಾಸಕರು, ಮಾನವಿ ಎ.ಪಾಪಾರೆಡ್ಡಿ ಮಾಜಿ ಶಾಸಕರು, ರಾಯಚೂರು, ಬಿ.ವೆಂಕಟಸಿಂಗ್ ಆಯುಕ್ತರು,ಕರ್ನಾಟಕ ಮಾಹಿತಿ ಹಕ್ಕು ಆಯೋಗ, ಕಲಬುರಗಿ ಪೀಠ, ಕಲಬುರಗಿ,ನಾಡೋಜ ಡಾ.ಮನು ಬಳಿಗಾರ ನಿಕಟ ಪೂರ್ವ ಅಧ್ಯಕ್ಷರು, ಕೇಂದ್ರ ಕ.ಸಾ.ಪ, ಜಯಣ್ಣ, ಮುಖಂಡರು,ಶ್ರೀಮತಿ ಎಸ್.ಪೂವಿತಾ ಜಿಲ್ಲಾಧಿಕಾರಿಗಳು, ರಾಯಚೂರು,ಬಸವರಾಜ ಸ್ವಾಮಿ ಸಂಪಾದಕರು, ಸುದ್ದಿಮೂಲ ಕನ್ನಡ ದಿನ ಪತ್ರಿಕೆ, ರಾಯಚೂರು,ಅರವಿಂದ ಕುಲಕರ್ಣಿ ಸಂಪಾದಕರು, ರಾಯಚೂರುವಾಣಿ ದಿನಪತ್ರಿಕೆ,ಭಗತರಾಜ ನಿಜಾಮಕಾರಿ ಸದಸ್ಯರು, ಕರ್ನಾಟಕ ಗಡಿಪ್ರದೇಶಾಭಿವೃದ್ಧಿ ಪ್ರಾಧಿಕಾರ ಆರ್.ಗುರುನಾಥ ಅಧ್ಯಕ್ಷರು, ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘ ರಾಯಚೂರು,ಜಿ. ಮಲ್ಲಿಕಾರ್ಜುನ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ,ಕೃಷ್ಣ ಶಾವಂತಗೇರ ಅಧ್ಯಕ್ಷರು, ಜಿಲ್ಲಾ ಸರಕಾರಿ ನೌಕರರ ಸಂಘ ಶರಣೇಗೌಡ ಎಸ್. ಮಾಜಿ ಅಧ್ಯಕ್ಷರು, ಜಿ.ಕ.ಸಾ.ಪರಿಷತ್ತು

ಅಸಗಮಿಸಲಿದ್ದಾರೆಂದರು.

, ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ಮಾತನಾಡಿ, 7ಗೋಷ್ಠಿಗಳು ನಡೆಯಲುವೆ. ಗೋಷ್ಠ-1ಜಿಲ್ಲಾ ದರ್ಶನ,ಗೋಷ್ಠ-3-ಶೈಕ್ಷಣಿಕ ವ್ಯವಸ್ಥೆ ಮತ್ತು ಸವಾಲುಗಳು,

ದಿ.14ರಂದು ಸಂಜೆ 4:30 ಗಂಟೆಗೆ ವಿಶೇಷ ಉಪನ್ಯಾಸ ಮಹಿಳಾ ಸಶಕ್ತೀಕರಣದಲ್ಲಿ ಸಾಹಿತ್ಯ ಮತ್ತು ಆಧ್ಯಾತ್ಮಿಕ ಉಪನ್ಯಾಸ ಕರಾಗ ಡಾ.ಕಾವ್ಯಶ್ರೀ ಮಹಾಗಾಂವಕರ್ ಆಗಮಿಸಲಿದ್ದಾರೆ.

ಸಂಜೆ 5-15ಕ್ಕೆ ಮಹಿಳಾ ಕವಿಗೋಷ್ಠಿ-3ಗೋಷ್ಠಿ-4ಸಮ್ಮೇಳನಾಧ್ಯಕ್ಷರ ಬದುಕು ಬರಹ,ಗೋಷ್ಠಿ-5-ಸರ್ಕೀಣ,ಗೋಷ್ಠಿ-6-ಸಮ ಸಮಾಜ ಸಾರಿದ ದಾರ್ಶನಿಕರು,ಕವಿಗೋಷ್ಠಿ-7 ನಡೆಯಲಿದೆ.

ದಿ.15ರಂದು ಸಂಜೆ 4:30 ಕ್ಕೆ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ,ಸಂಜೆ5.20ಕ್ಕೆ ಬಹಿರಂಗ ಅಧಿವೇಶನ,ಸಂಜೆ 6ಕ್ಕೆ ಸಮಾರೋಪ ಹಾಗೂ ಸನ್ಮಾನ ಸಮಾರಂಭ ನಡೆಯಲಿದೆ ಎಂದರು. ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ,ಸಂಜೆ-5-30ಕ್ಕೆ ಬಹಿರಂಗ ಅಧಿವೇಶನ,ಸಂಜೆ -6ಕ್ಕೆ ಸಮಾರೋಪ ಹಾಗೂ ಸನ್ಮಾನ ಸಮಾರಂಭ ನಡೆಯಲಿದೆ ಎಂದರು.

ಈ ಸಂದರ್ಭದಲ್ಲಿ ಬಾಬು ಬಂಡಾರಿಗಲ್, ತಾಯಪ್ಪ ಹೊಸೂರು,ರಾವತ್ ರಾವ್,ಜಯಣ್ಣ,ಮಹಾಂತೇಶ ಮಸ್ಕಿ,ಐಯ್ಯೊ ಹುಡಾ,ತಾಯಪ್ಪ,ಮಂಜುನಾಥ,ನಾಗಪ್ಪ ಹೊರಪೇಟೆ,ಜ.ಶಿವಮೂರ್ತಿ,ಹಾಫೀಜ್ ಉಲಾ,ದಂಡಪ್ಪ ಬಿರಾದಾರ್ ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಿಗೆ ಜಿಲ್ಲೆಗೊಂದು ವಿಶೇಷ ನೀರಾವರಿ ಯೋಜನೆ : ಸಚಿವ ಅಜಯ್ ಸಿಂಗ್

ಕಲಬುರಗಿ :

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಕೃಷಿಕರ ಸುಸ್ಥಿರ ಅಭಿವೃದ್ಧಿಗೆ ಜಲಸಮೃದ್ಧಿಯ ಭದ್ರ ಅಡಿಪಾಯ ಹಾಕುವ ಉದ್ದೇಶದಿಂದ ಸಣ್ಣ ನೀರಾವರಿ ಕ್ಷೇತ್ರದಲ್ಲಿ ಹೊಸ ಯೋಜನೆಗಳನ್ನು ರೂಪಿಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಡಾ.ಅಜಯ್ ಸಿಂಗ್ ತಿಳಿಸಿದ್ದಾರೆ.

ಬೆಂಗಳೂರಿನ ಸಣ್ಣ ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ನೀರಾವರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಜಿಲ್ಲೆಗೊಂದು ವಿಶೇಷ ನೀರಾವರಿ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಹಾಗೂ ವಿಜಯನಗರ ಜಿಲ್ಲೆಗಳ ನೀರಾವರಿ ಮೂಲಸೌಕರ್ಯ ಬಲಪಡಿಸುವುದು, ಜಲಸಂಪನ್ಮೂಲಗಳ ಸಮರ್ಪಕ ಬಳಕೆ ಮತ್ತು ಕೃಷಿ ಉತ್ಪಾದಕತೆ ಹೆಚ್ಚಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಹೇಳಿದರು.

ಪ್ರಗತಿಯಲ್ಲಿರುವ ಯೋಜನೆಗಳ ಅನುಷ್ಠಾನ, ಸ್ಥಗಿತಗೊಂಡ ಕಾಮಗಾರಿಗಳ ಪುನಶ್ಚೇತನ ಹಾಗೂ ಹೊಸ ಯೋಜನೆಗಳ ರೂಪುರೇಷೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ವಿಧಾನಸಭಾ ಕ್ಷೇತ್ರವಾರು ಶಾಸಕರ ಅಭಿಪ್ರಾಯ ಪಡೆದು ಹೊಸ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಪ್ರಗತಿಪರ ಡಿಜಿಟಲ್ ಪತ್ರಕರ್ತರ ಸಂಘದಿಂದ ವಿವಿಧ ಕ್ಷೇತ್ರದ 210 ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ



ಕಲಬುರಗಿ:

ಕರ್ನಾಟಕ ಪ್ರಗತಿಪರ ಡಿಜಿಟಲ್ ಮೀಡಿಯಾ ಪತ್ರಕರ್ತರ ಕಲ್ಯಾಣ ಸಂಘದ ವತಿಯಿಂದ 71ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ ನಗರದ ಡಿಜಿಟಲ್ ಪತ್ರಿಕಾ ಭವನದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗೆ ಕೊಡುಗೆ ನೀಡಿದ 210 ಸಾಧಕರನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ ಹಿರಿಯ ಸಾಹಿತಿ ಡಾ. ಸ್ವಾಮಿ ರಾವ್ ಕುಲಕರ್ಣಿ ಸೇರಿದಂತೆ ಗಣ್ಯರು ಕಾರ್ಯಕ್ರಮಕ್ಕೆ ಮೆರುಗು ತಂದರು.

ಸಂಘದ ರಾಜ್ಯಾಧ್ಯಕ್ಷ ಎಂ.ಡಿ. ಸದ್ದಾಮ್ ಹುಸೇನಿ ಮಾತನಾಡಿ, ಕನ್ನಡ ನೆಲ, ಜಲ ಹಾಗೂ ಅಭಿವೃದ್ಧಿಗಾಗಿ ನಮ್ಮ ಸಂಘ ಮತ್ತು ಪತ್ರಕರ್ತರು ಸದಾ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಲಿದೆ. ಮೊದಲ ಬಾರಿಗೆ ಡಿಜಿಟಲ್ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತಿರುವುದು ಸಂತಸದ ಸಂಗತಿ. ಕಾರ್ಯಕ್ರಮದಲ್ಲಿ 540ಕ್ಕೂ ಹೆಚ್ಚು ಜನರು ಭಾಗವಹಿಸಿರುವುದು ಸಂಘದ ಕಾರ್ಯಚಟುವಟಿಕೆಗಳಿಗೆ ದೊರೆತ ಬೆಂಬಲವನ್ನು ತೋರಿಸುತ್ತದೆ. ಮುಂದಿನ ದಿನಗಳಲ್ಲಿ ಕನ್ನಡ ಜಾಗೃತಿ ಹಾಗೂ ನಾಡಿನ ಅಭಿವೃದ್ಧಿಗಾಗಿ ಸಂಘದ ಪದಾಧಿಕಾರಿಗಳು ಶ್ರಮಿಸಲಿದ್ದಾರೆ ಎಂದರು.

ಹಿರಿಯ ಗಾಯಕ ಜಸ್ವೀರ್ ಸಿಂಗ್ ಮತ್ತು ಅವರ ತಂಡ ಕನ್ನಡ ಗೀತೆಗಳನ್ನು ಹಾಡುವ ಮೂಲಕ ಕನ್ನಡ ಭಾಷೆ, ಕರ್ನಾಟಕದ ಇತಿಹಾಸ ಮತ್ತು ಪರಂಪರೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಅಕ್ರಮಲಿ ಸೌಕಾರ್ ಶಿವಕುಮಾರ್ ಬಿರಾದರ್ ತಾಜುದ್ದೀನ್, ರಾಜ್ಯ ಕಾರ್ಯದರ್ಶಿ ಇಮ್ರಾನ್ ಖಾನ್, ಖಜಾಂಚಿ ಚಂದ್ರಶೇಖರ ಬೆಳಮಗಿ, ಜಂಟಿ ಕಾರ್ಯದರ್ಶಿ ಶಿವಕುಮಾರ್ ಎಲ್ಡೆ, ಕಾರ್ಯದರ್ಶಿಗಳಾದ ರೆಹಮಾನ್, ನಯೀಮ್, ಸದಸ್ಯರಾದ ಮಹೇಶ್ ಚವಾಣ್, ಅಮ್ಜದ್ ಖಾನ್, ನಬಿ ಪಟೇಲ್, ಕಲಬುರಗಿ ಜಿಲ್ಲಾಧ್ಯಕ್ಷ ಸಂತೋಷ್ ಜಮಾದಾರ್ ನಗರ ಅಧ್ಯಕ್ಷ ಅಯೂಬ್ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು. ವೇದಿಕೆಯಲ್ಲಿ ಸಿದ್ದು ಹಿರೇಮಠ, ಆಂದೋಲ ಶ್ರೀಗಳು, ಪಾಳಾ ಶ್ರೀಗಳು, ಚಂದ್ರಶೇಖರ ಹಿರೇಮಠ, ಹೋರಾಟಗಾರರು ಹಾಗೂ ಡಾ. ಫೈಸಲ್ ಸಿದ್ದಿಕಿ ಉಪಸ್ಥಿತರಿದ್ದರು. ಕಲಬುರಗಿಯ ರಾಜಕೀಯ ಮುಖಂಡರು, ಹೋರಾಟಗಾರರು ಹಾಗೂ ಪತ್ರಕರ್ತರು ಭಾಗವಹಿಸಿದ್ದರು.



ಭಾರತೀಯ ನ್ಯಾಯಶಾಸ್ತ್ರದ ಸಂಶೋಧನೆಗೆ ಉತ್ತೇಜನ: ಸಿ.ಯು.ಕೆ- ವಿಜ್ಞಾನೇಶ್ವರ ಪ್ರತಿಷ್ಠಾನ ಟ್ರಸ್ಟ್ ನಡುವೆ ಒಪ್ಪಂದ

ಕಲಬುರಗಿ:

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ) ಮತ್ತು ಕಲಬುರಗಿ ಜಿಲ್ಲೆಯ ಮರ್ತೂರಿನ ವಿಜ್ಞಾನೇಶ್ವರ ಪ್ರತಿಷ್ಠಾನ ಟ್ರಸ್ಟ್ (ರಿ.) ಶೈಕ್ಷಣಿಕ ಸಹಯೋಗ, ಸಂಶೋಧನೆ ಮತ್ತು ಜ್ಞಾನ ವಿನಿಮಯಕ್ಕಾಗಿ ಸಾಂಸ್ಥಿಕ ಪಾಲುದಾರಿಕೆಯನ್ನು ಸ್ಥಾಪಿಸುವ ಉದ್ದೇಶದಿಂದ ಸೋಮವಾರ ವಿಶ್ವವಿದ್ಯಾಲಯದ ಸೆಮಿನಾರ್ ಸಭಾಂಗಣದಲ್ಲಿ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದವು.

ಸಿಯುಕೆಯ ಕಾನೂನು ಅಧ್ಯಯನ ವಿಭಾಗ ಮತ್ತು ವಿಜ್ಞಾನೇಶ್ವರ ಪ್ರತಿಷ್ಠಾನ ಟ್ರಸ್ಟ್ ನಡುವೆ ಏರ್ಪಟ್ಟಿರುವ ಈ ಒಪ್ಪಂದವು, ಸಹಯೋಗದ ಶೈಕ್ಷಣಿಕ ಹಾಗೂ ಸಂಶೋಧನಾ ಉಪಕ್ರಮಗಳ ಮೂಲಕ ಭಾರತೀಯ ನ್ಯಾಯಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ಇತರ ಅಧ್ಯಯನ ಕ್ಷೇತ್ರಗಳನ್ನು ಉತ್ತೇಜಿಸುವ, ಸಂರಕ್ಷಿಸುವ ಹಾಗೂ ಪ್ರಸಾರ ಮಾಡುವ ಗುರಿಯನ್ನು ಹೊಂದಿದೆ.

ಈ ಸಹಯೋಗದ ವ್ಯಾಪ್ತಿಯಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಭಾಗವಹಿಸುವಿಕೆ, ಪಠ್ಯಕ್ರಮ ಅಭಿವೃದ್ಧಿ, ಶೈಕ್ಷಣಿಕ ಕಾರ್ಯಕ್ರಮಗಳ ಆಯೋಜನೆ, ಗ್ರಂಥಾಲಯ ಮತ್ತು ಅಧ್ಯಯನ ಸೌಲಭ್ಯಗಳ ಬಳಕೆ, ಜಂಟಿ ಸಂಶೋಧನಾ ಯೋಜನೆಗಳು ಮತ್ತು ಪ್ರಕಟಣೆಗಳು, ವಿಚಾರ ಸಂಕಿರಣಗಳು, ಸಮ್ಮೇಳನಗಳು ಹಾಗೂ ಜನಸಂಪರ್ಕ ಚಟುವಟಿಕೆಗಳು ಸೇರಿವೆ.

ಸಿಯುಕೆಯ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ ಮತ್ತು ವಿಜ್ಞಾನೇಶ್ವರ ಪ್ರತಿಷ್ಠಾನ ಟ್ರಸ್ಟ್ (ರಿ.), ಮರ್ತೂರಿನ ಅಧ್ಯಕ್ಷರಾದ ಶ್ರೀ ಬಸವರಾಜ ಪಾಟೀಲ್ ಸೇಡಂ ಅವರು, ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಕಲಬುರಗಿ: ನಿರ್ಮಾಣ ಹಂತದ ಸಿಮೆಂಟ್ ಫ್ಯಾಕ್ಟರಿಯಲ್ಲಿ ಅಗ್ನಿ ಅವಘಡ: 20ಕ್ಕೂ ಹೆಚ್ಚು ಶೆಡ್‌ಗಳು ಭಸ್ಮ



ಕಲಬುರಗಿ;

ಜಿಲ್ಲೆಯ ಹೊನ್ನಕಿರಣಗಿ ಗ್ರಾಮದ ಬಳಿ ಇರುವ ನಿರ್ಮಾಣ ಹಂತದ 'ಗುಲ್ಬರ್ಗ ಸಿಮೆಂಟ್ ಲಿಮಿಟೆಡ್' ಕಾರ್ಖಾನೆಯಲ್ಲಿ ಸಿಲಿಂಡರ್ ಸ್ಫೋಟಗೊಂಡು ಕಾರ್ಮಿಕರಿಗಾಗಿ ನಿರ್ಮಿಸಿದ್ದ 20ಕ್ಕೂ ಹೆಚ್ಚು ಶೆಡ್‌ಗಳು ಸಂಪೂರ್ಣವಾಗಿ ಸುಟ್ಟು ಬೂದಿಯಾಗಿವೆ. ಘಟನೆಯಲ್ಲಿ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

ಗುಲ್ಬರ್ಗ ಸಿಮೆಂಟ್ ಲಿಮಿಟೆಡ್ ಕಾರ್ಖಾನೆಯ ಆವರಣದಲ್ಲಿ ಏಕಾಏಕಿ ಸಿಲಿಂಡರ್ ಸ್ಫೋಟಗೊಂಡಿದ್ದು ಬೆಂಕಿಯ ಕಿಡಿಗಳು ಸುತ್ತಮುತ್ತ ವ್ಯಾಪಿಸಿವೆ. ಇದರ ಪರಿಣಾಮವಾಗಿ ಕಾರ್ಮಿಕರು ವಾಸಿಸುತ್ತಿದ್ದ ಅಥವಾ ಬಳಕೆಗಾಗಿ ನಿರ್ಮಿಸಿದ್ದ 20ಕ್ಕೂ ಅಧಿಕ ಶೆಡ್‌ಗಳು ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಗಿವೆ.

ಶೆಡ್‌ಗಳಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಬಟ್ಟೆಗಳು, ದವಸ ಧಾನ್ಯಗಳು ಹಾಗೂ ಇತರೆ ವಸ್ತುಗಳು ಸಂಪೂರ್ಣವಾಗಿ ಭಸ್ಮವಾಗಿವೆ. ಸ್ಫೋಟ ಸಂಭವಿಸಿದ ಸಮಯದಲ್ಲಿ ಕಾರ್ಮಿಕರೆಲ್ಲರೂ ಕೆಲಸಕ್ಕೆ ತೆರಳಿದ್ದರಿಂದ ಮತ್ತು ಶೆಡ್‌ಗಳಲ್ಲಿ ಯಾರೂ ಇಲ್ಲದ ಕಾರಣ ಭಾರೀ ಅನಾಹುತವೊಂದು ತಪ್ಪಿದಂತಾಗಿದೆ.

ವಿಷಯ ತಿಳಿದ ಕೂಡಲೇ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ತುರ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿಯನ್ನು ಸಂಪೂರ್ಣವಾಗಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಘಟನೆ ಫರಹತಾಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಸ್ಥಳದಲ್ಲಿ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಬೀದರ್ 5 ಕೋಟಿ ರೂ. ವೆಚ್ಚದಲ್ಲಿ ಅರಣ್ಯ ಭವನ ನಿರ್ಮಾಣಕ್ಕೆ ಸಚಿವ ಈಶ್ವರ್ ಖಂಡ್ರೆ ಚಾಲನೆ



ಬೀದರ್ :


ನಗರದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಅರಣ್ಯ ಭವನ ಹಾಗೂ 2 ಕೋಟಿ ರೂ. ವೆಚ್ಚದಲ್ಲಿ ನೌಬಾದ್‌ನಲ್ಲಿರುವ ಟ್ರೀ ಪಾರ್ಕ್ ಅಭಿವೃದ್ಧಿ ಕಾಮಗಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಚಾಲನೆ ನೀಡಿದರು.

ನಗರದ ನೌಬಾದ್‌ನಲ್ಲಿರುವ ಅರಣ್ಯ ಇಲಾಖೆಯ ಆವರಣದಲ್ಲಿ ಸೋಮವಾರ ನೂತನ ಅರಣ್ಯ ಭವನ ಕಟ್ಟಡ ನಿರ್ಮಾಣ ಹಾಗೂ ವೃಕ್ಷೋದ್ಯಾನ್ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನಾನು ಅರಣ್ಯ ಸಚಿವನಿದ್ದ ಅವಧಿಯಲ್ಲಿ ಜಿಲ್ಲೆಯಲ್ಲಿ ಹಸಿರು ಪರಿಸರವನ್ನು ಬೆಳೆಸುವ ನಿಟ್ಟಿನಲ್ಲಿ ಮಕ್ಕಳಲ್ಲಿ ಪರಿಸರ ಪ್ರೇಮ ಬೆಳೆಸುವುದರೊಂದಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಉದ್ಯಾನವನಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಗಳನ್ನು ರೂಪಿಸಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗಿದೆ ಎಂದರು.

ಭಾಲ್ಕಿ ತಾಲ್ಲೂಕಿನ ಇಂಚೂರು ಗ್ರಾಮದಲ್ಲಿ ಈಗಾಗಲೇ ಉದ್ಘಾಟಿಸಿರುವ ಟ್ರೀ ಪಾರ್ಕ್ ಬೀದರ್ ಜಿಲ್ಲೆಯ ಪ್ರಮುಖ ಆಕರ್ಷಣೆಯ ಕೇಂದ್ರವಾಗಿ ರೂಪುಗೊಂಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬಗಳು ಹಾಗೂ ಮಕ್ಕಳು ಅಲ್ಲಿಗೆ ಭೇಟಿ ನೀಡುತ್ತಿರುವುದು ಸಂತಸದ ಸಂಗತಿಯಾಗಿದೆ. ಇದೇ ಮಾದರಿಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಆಕರ್ಷಕ ಟ್ರೀ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಶಾಸಕ ರಹೀಂ ಖಾನ್ ಅಧ್ಯಕ್ಷತೆ ವಹಿಸಿದರು. ಈ ಸಂದರ್ಭದಲ್ಲಿ ಬುಡಾ ಅಧ್ಯಕ್ಷ ವಿನೋದಕುಮಾರ್ ಅಪ್ಪೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠಲರಾವ್, ಪ್ರಾದೇಶಿಕ ಉಪ ಅರಣ್ಯ ಸರಂಕ್ಷಣಾಧಿಕಾರಿ ಆಶಿಶ್ ರೆಡ್ಡಿ, ಲೋಕೋಪಯೋಗಿ ಇಲಾಖೆಯ ಇಇ ಶಿವಶಂಕರ ಕಾಮಶೆಟ್ಟಿ, ಸಾಮಾಜಿಕ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀನಿವಾಸ್ ಎರಡೋಣಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ್ ಹೇಮಾ, ವಲಯ ಅರಣ್ಯಾಧಿಕಾರಿ ಪ್ರವೀಣ್ ಮೋರೆ ದೇರಿದಂತೆ ಶಾಲಾ ಮಕ್ಕಳು ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

ವಕೀಲರ ರಕ್ಷಣೆಗೆ ಪ್ರತ್ಯೇಕ ಕಾಯ್ದೆ ಜಾರಿಗೆ ಆಗ್ರಹಿಸಿ ನ್ಯಾಯವಾದಿಗಳ ಧರಣಿ



ಕಲಬುರಗಿ,

ವಕೀಲರ ಮೇಲಿನ ಭೀಕರ ಹಲ್ಲೆ, ದೌರ್ಜನ್ಯ ಹಾಗೂ ಕೊಲೆ ಪ್ರಕರಣಗಳನ್ನು ತಡೆಗಟ್ಟುವಂತೆ ಹಾಗೂ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಬಲಪಡಿಸುವಂತೆ ಆಗ್ರಹಿಸಿ ಗುಲ್ಬರ್ಗಾ ನ್ಯಾಯವಾದಿಗಳ ಸಂಘವು ಧರಣಿ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿತು.


ವಕೀಲರು ನ್ಯಾಯಾಂಗ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದು, ಸಮಾಜದಲ್ಲಿ ನ್ಯಾಯ ಮತ್ತು ಕಾನೂನಿನ ರಕ್ಷಣೆಗಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂತಹ ವಕೀಲರ ಮೇಲೆಯೇ ಹಲ್ಲೆ ಹಾಗೂ ದೌರ್ಜನ್ಯ ಪ್ರಕರಣಗಳು ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಕೀಲರಿಗೆ ಸೂಕ್ತ ಭದ್ರತೆ ಇಲ್ಲದಿರುವುದರಿಂದ ನಿರ್ಭೀತಿಯಿಂದ ವೃತ್ತಿ ನಿರ್ವಹಿಸಲು ತೊಂದರೆಯಾಗುತ್ತಿದೆ ಎಂದು ಸಂಘದ ಪದಾಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ವಕೀಲರ ಮೇಲೆ ನಡೆಯುವ ಹಲ್ಲೆ, ದೌರ್ಜನ್ಯ, ಬೆದರಿಕೆ ಹಾಗೂ ಹತ್ಯೆ ಪ್ರಕರಣಗಳನ್ನು ಜಾಮೀನು ರಹಿತ ಅಪರಾಧಗಳೆಂದು ಪರಿಗಣಿಸಿ, ತಪ್ಪಿತಸ್ಥರಿಗೆ ಕಠಿಣ ಜೈಲು ಶಿಕ್ಷೆ ಮತ್ತು ಭಾರಿ ದಂಡ ವಿಧಿಸುವ ಕಾನೂನು ರೂಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಕೀಲರ ಮೇಲಿನ ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ನಿಗದಿತ ಅವಧಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. ರಾಜ್ಯದ ಎಲ್ಲ ನ್ಯಾಯಾಲಯಗಳ ಆವರಣದಲ್ಲಿ ಮೆಟಲ್ ಡಿಟೆಕ್ಟರ್ ಹಾಗೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಬಿಗಿ ಭದ್ರತೆ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ವಕೀಲರ ಜೀವ ಮತ್ತು ವೃತ್ತಿ ಭದ್ರತೆಗೆ ಸರಕಾರ ಹೆಚ್ಚಿನ ಆದ್ಯತೆ ನೀಡಬೇಕು. ವಕೀಲರ ಸಂರಕ್ಷಣಾ ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ವಿಳಂಬ ಧೋರಣೆ ಅನುಸರಿಸದೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಗುಲ್ಬರ್ಗಾ ವಕೀಲರ ಸಂಘ ಸರ್ಕಾರವನ್ನು ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಎಸ್.ವಿ. ಪಾಸರ್ (ಮಹಾಗಾಂವ್), ಉಪಾಧ್ಯಕ್ಷ ಭೀಮಾಶಂಕರ ಎಲ್. ಪೂಜಾರಿ, ಖಜಾಂಚಿ ಮಂಜುನಾಥ್ ಜಿ. ಪಾಟೀಲ್, ಪ್ರಧಾನ ಕಾರ್ಯದರ್ಶಿ ಸಿದ್ದರಾಮ್ ಬಿ. ವಾಡಿ ಹಾಗೂ ಇತರರು ಉಪಸ್ಥಿತರಿದ್ದರು.



ತೂಕದಲ್ಲಿ ವ್ಯತ್ಯಾಸ, ಬಂದೂಕವಾಲಾ ವೇ ಬ್ರಿಡ್ಜ್ ಸೀಝ್

ಕಲಬುರಗಿ,

ವೇ ಬ್ರಿಡ್ಜ್ ತೂಕದಲ್ಲಿನ ವ್ಯತ್ಯಾಸದ ದೂರಿನ ಹಿನ್ನೆಲೆಯಲ್ಲಿ ಕಲಬುರಗಿ ನಗರದ ಕಪನೂರ ಪ್ರದೇಶದಲ್ಲಿರುವ ಬಂದೂಕವಾಲಾ ವೇ ಬ್ರಿಡ್ಜ್ ಮೇಲೆ ಕಾನೂನು ಮಾಪನಶಾಸ್ತ್ರ ಅಧಿನಿಯಮ-2009ರ ಪ್ರಕಾರ ಮೊಕದ್ದಮೆ ಹೂಡಿ ವೇ- ಬ್ರಿಡ್ಜ್ ಸೀಝ್ ಮಾಡಲಾಗಿದೆ.

ಗುಲಬರ್ಗಾ ಲಾರಿ ಮಾಲಕರ ಸಂಘ (ರಿ), ಕಲಬುರಗಿ ರವರ ದೂರಿನ ಮೇರೆಗೆ ಕಾನೂನು ಮಾಪನ ಇಲಾಖೆಯ ಅಧಿಕಾರಿಗಳು ಸೋಮವಾರ ವಾಹನವೊಂದನ್ನು ಕೇಂದ್ರ ಉಗ್ರಾಣ ಸಂಸ್ಥೆ ಕಲಬುರಗಿಯಲ್ಲಿ ಟೆಸ್ಟ್ ವೇಟ್ ಸಹಾಯದಿಂದ ತೂಕ ಮಾಡಿಸಿ, ಬಳಿಕ ಅದೇ ವಾಹನವನ್ನು ಮೆ.ಬಂದೂಕವಾಲಾ ವೇಯಿಂಗ್ ಸರ್ವೀಸ್ ವೇ-ಬ್ರಿಡ್ಜ್ ನಲ್ಲಿ ತೂಕ ಮಾಡಿಸುವ ಮೂಲಕ ಸ್ಥಳ ಪರಿಶೀಲನೆ ಮಾಡಿದರು. ಈ ವೇಳೆ ತೂಕದಲ್ಲಿ 80-100 ಕೆ.ಜಿ. ವ್ಯತ್ಯಾಸ ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಸದರಿ ವೇ-ಬ್ರಿಡ್ಜ್ ಜಪ್ತಿ ಮಾಡಲಾಗಿದೆ ಎಂದು ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರು ಗ್ರೇಡ್-1ನ ರಫೀಕಸಾಬ ಲಾಡಜಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಗುಲಬರ್ಗಾ ಲಾರಿ ಮಾಲಕರ ಸಂಘ (ರಿ) ಗುಲಬರ್ಗಾ ಅಧ್ಯಕ್ಷ ಮುಹಮ್ಮದ್ ಮೊಯಿನುದ್ದೀನ್, ಕಾರ್ಯದರ್ಶಿ ವಿ.ಆರ್ ಸ್ವಾಮಿ ಹಾಗೂ ಇತರ ಸದಸ್ಯರು ಮತ್ತು ವೇ-ಬ್ರಿಡ್ಜ್ ಮಾಲಕ ಅಯ್ಯೂಬ್ ಬಂದೂಕವಾಲಾ ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಕಬ್ಬು ಬೆಳೆಗಾರರ ಬಿಕ್ಕಟ್ಟನ್ನು ಬಗೆಹರಿಸಲಿ; ಆಗದಿದ್ದರೆ, ಅಧಿಕಾರ ಬಿಟ್ಟು ತೊಲಗಲಿ

ರೈತರನ್ನು ಎದುರು ಹಾಕಿಕೊಂಡ ಸರ್ಕಾರಗಳು ಉಳಿದ ಉದಾಹರಣೆಗಳಿಲ್ಲ. 1980ರಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿದ ಗುಂಡೂರಾಯರ ಸರ್ಕಾರ ಪತನವಾಗಿತ್ತು. 2020-21ರಲ್ಲಿ ಮೂರು ಕರಾಳ ಕಾಯ್ದೆಗಳನ್ನು ಜಾರಿಗೆ ತಂದಿದ್ದ ಮೋದಿಯವರ ಸರ್ಕಾರ, ರೈತರ ಪ್ರತಿಭಟನೆಯ ನಂತರ ಕಾಯ್ದೆಗಳನ್ನು ವಾಪಸ್ ಪಡೆದಿತ್ತು. ಅಧಿಕಾರಸ್ಥರಿಗೆ ಇತಿಹಾಸದ ಅರಿವಿದ್ದರೆ, ಕಬ್ಬು ಬೆಳೆಗಾರರ ಬಿಕ್ಕಟ್ಟನ್ನು ಬಗೆಹರಿಸಲಿ. ಆಗದಿದ್ದರೆ, ಅಧಿಕಾರ ಬಿಟ್ಟು ತೊಲಗಲಿ.

ಕಬ್ಬು ಬೆಳೆ ವಿಚಾರದಲ್ಲಿ ರಾಜ್ಯ ಸರ್ಕಾರ ತನ್ನ ಜವಾಬ್ದಾರಿ ನಿಭಾಯಿಸಬೇಕು. ಅದನ್ನು ಬಿಟ್ಟು ಕೇಂದ್ರ ಸರ್ಕಾರದ ಕಡೆ ಬೆರಳು ತೋರುವುದನ್ನು ನಿಲ್ಲಿಸಬೇಕು ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಲ್ಹಾದ್ ಜೋಶಿ ಮೊನ್ನೆ ಬೆಂಗಳೂರಿನಲ್ಲಿ ಹೇಳಿದ್ದಾರೆ.

ಅಸಲಿಗೆ ಕಬ್ಬಿನ ಕನಿಷ್ಠ ನ್ಯಾಯಸಮ್ಮತ ಬೆಲೆ() ನಿಗದಿಪಡಿಸುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೆ. ಅಷ್ಟೇ ಅಲ್ಲ, ಸಕ್ಕರೆಗೆ ಕನಿಷ್ಠ ಮಾರಾಟ ಬೆಲೆ() ನಿಗದಿ ಮಾಡುವುದು ಕೂಡ ಕೇಂದ್ರ ಸರ್ಕಾರವೇ. ಕಬ್ಬು ಬೆಳೆಗಾರರು ಕೇಳುತ್ತಿರುವುದು ಎಫ್‌ಆರ್‌ಪಿ ಮತ್ತು ಎಂಎಸ್‌ಪಿ ನಿಗದಿ ಮಾಡಿ ಎಂದು. ಕೇಂದ್ರ ಸರ್ಕಾರ ಇವೆರಡನ್ನು ಹೆಚ್ಚಿಸಿದರೆ, ಆಗ ರೈತರು ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ರಾಜ್ಯದ ಸಲಹಾ ಬೆಲೆ() ಕೇಳುತ್ತಾರೆ, ಪಡೆಯುತ್ತಾರೆ.

ಕೇಂದ್ರ ಸರ್ಕಾರ ನಿಗದಿ ಮಾಡಿರುವ ಸಕ್ಕರೆ ಕನಿಷ್ಠ ಮಾರಾಟ ಬೆಲೆ- ಕೆಜಿಗೆ ರೂ. 31 ಇದ್ದರೂ, ಕಾರ್ಖಾನೆ ಮಾಲೀಕರು ಕೆಜಿಗೆ 51ರಿಂದ 61ರವರೆಗೂ ಮಾರಿಕೊಳ್ಳುತ್ತಾರೆ. ಜೊತೆಗೆ ಕಬ್ಬಿನ ಉಪಉತ್ಪನ್ನಗಳಾದ ಮೊಲಾಸಿಸ್, ಎಥೆನಾಲ್, ಬೆಗಾಸ್‌ನಿಂದ ಉತ್ಪಾದಿಸುವ ವಿದ್ಯುತ್ ಮತ್ತು ಸಾವಯವ ಗೊಬ್ಬರದಿಂದಲೂ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಲಾಭವಿದೆ. ಸಕ್ಕರೆ ಮತ್ತು ಉಪಉತ್ಪನ್ನಗಳಿಂದ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಸರಕು ಮತ್ತು ಸೇವಾ ತೆರಿಗೆ() ರೂಪದಲ್ಲಿ ವರ್ಷಕ್ಕೆ ಸಾವಿರಾರು ಕೋಟಿ ರೂ.ಗಳ ಆದಾಯವಿದೆ.

ಇದು ಅನಕ್ಷರಸ್ಥ ರೈತನಿಗೂ ಗೊತ್ತಿರುವ ಕಬ್ಬಿನ ಲೆಕ್ಕಾಚಾರ ಮತ್ತು ಸತ್ಯ. ಇದು ಜವಾಬ್ದಾರಿಯುತ ಕೇಂದ್ರ ಸಚಿವರಿಗೆ ಗೊತ್ತಿಲ್ಲವೇ? ಗೊತ್ತಿದ್ದೂ ಇದು ರಾಜ್ಯ ಸರ್ಕಾರದ ಜವಾಬ್ದಾರಿ ಎಂದು ಎಷ್ಟು ಸಲ ಸುಳ್ಳು ಹೇಳಬಹುದು? ಮಡಿಲ ಮಾಧ್ಯಮಗಳು ಸಚಿವರನ್ನು ಎಷ್ಟು ಬಾರಿ ಬಚಾವು ಮಾಡಬಹುದು? ಇದನ್ನು ರೈತರು ಪ್ರತಿವರ್ಷ ಕೇಳುತ್ತಲೇ ಇರಬೇಕಾ?

ಪ್ರಲ್ಹಾದ್ ಜೋಶಿಯವರು ಮೂಲತಃ ಪೇಶ್ವೆ ವಂಶಸ್ಥರು. ಅವರು ಪ್ರತಿನಿಧಿಸುವ ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ- ಅಂದರೆ ಶೇ. 40ರಷ್ಟು ಲಿಂಗಾಯತರಿದ್ದಾರೆ, ಶೇ. 34ರಷ್ಟು ಹಿಂದುಳಿದ ವರ್ಗದವರಿದ್ದಾರೆ, ಶೇ. 17ರಷ್ಟು ಮುಸ್ಲಿಮರಿದ್ದಾರೆ. ಜೋಶಿಯವರು ಪ್ರತಿನಿಧಿಸುವ ಬ್ರಾಹ್ಮಣರ ಸಂಖ್ಯೆ ಇಲ್ಲಿ ಬೆರಳೆಣಿಕೆಯಷ್ಟು- ಕೇವಲ ಶೇ. 2.5ರಷ್ಟು. ಪರಿಸ್ಥಿತಿ ಹೀಗಿದ್ದರೂ, ಇಲ್ಲಿಯ ಜನ ಇವ ನಮ್ಮವನೆಂದು ಪ್ರಲ್ಹಾದ್ ಜೋಶಿಯವರನ್ನು 2004ರಿಂದ 2024ರವರೆಗೆ- ಸತತವಾಗಿ 5 ಬಾರಿ ಗೆಲ್ಲಿಸಿದ್ದಾರೆ. 5 ಬಾರಿ ಗೆಲ್ಲಿಸಿ ಹಿರಿಯ ಸಂಸದನ ಸ್ಥಾನಕ್ಕೇರುವಂತೆ ನೋಡಿಕೊಂಡಿದ್ದಾರೆ. ಆ ಹಿರಿತನದ ಬಲದಿಂದ ಅವರು ಕೇಂದ್ರದಲ್ಲಿ ಮಹತ್ವದ ಮೂರು ಖಾತೆಗಳಿಗೆ ಮಂತ್ರಿಗಳಾಗಿದ್ದಾರೆ.

ಇಂದು ಕೇಂದ್ರದಲ್ಲಿ ಮಹತ್ವದ ಖಾತೆಗಳನ್ನು ಹೊಂದುವ, ಪ್ರಧಾನಿ ಮೋದಿಯವರೊಂದಿಗೆ ಸರಿಸಮನಾಗಿ ಕೂರುವ ಅಪೂರ್ವ ಅವಕಾಶ ಕಲ್ಪಿಸಿಕೊಟ್ಟಿರುವ ಉತ್ತರ ಕರ್ನಾಟಕದ ಜನರಿಗಾಗಿ- ಅನ್ನದಾತರಿಗಾಗಿ- ಅಧಿಕಾರವನ್ನು ಪಣಕ್ಕಿಟ್ಟು ಹೋರಾಡಬೇಕಾದ ಪ್ರಲ್ಹಾದ್ ಜೋಶಿಯವರು, ರಾಜ್ಯ ಸರ್ಕಾರವನ್ನು ದೂರುತ್ತ, ಕೇಂದ್ರ ಸರ್ಕಾರ ಸಮಿತಿ ರಚಿಸಿದೆ ಎಂಬ ಸಬೂಬು ಹೇಳುತ್ತ ಕಾಲದೂಡುತ್ತಿದ್ದಾರೆ.

ಅಷ್ಟಕ್ಕೂ ಅವರಾಗಿಯೇ ಮುಂದೆ ಬಂದು ಸಮಿತಿ ರಚಿಸಿದ್ದಲ್ಲ. ಕಳೆದ ಅಕ್ಟೋಬರ್ 10ರಂದು ಕಬ್ಬು ಬೆಳೆಗಾರರು ಪ್ರತಿಭಟನೆಗೆ ಮುಂದಾದಾಗ, 12ರಂದು ರೈತ ಪ್ರತಿನಿಧಿಗಳನ್ನು ನವದೆಹಲಿಗೆ ಕರೆಸಿಕೊಂಡು, ಕಾಟಾಚಾರಕ್ಕೆ ಸಭೆ ನಡೆಸಿ, ಒಂದು ತಿಂಗಳು ಸಮಯ ಕೇಳಿದ್ದರು. ನಾವು ಆರಿಸಿ ಕಳುಹಿಸಿದ ಮಂತ್ರಿಯೇ ನಮಗೆ ಮೋಸ ಮಾಡಿದರು ಎಂದು ಸಿಟ್ಟಾದ ಕಬ್ಬು ಬೆಳೆಗಾರರು ಅಕ್ಟೋಬರ್ 13ರಿಂದ ಪ್ರತಿಭಟನೆಗಿಳಿದರು. ರಸ್ತೆ, ರೈಲು ತಡೆಗೆ ಮುಂದಾಗಿ, ಮಂತ್ರಿಗಳ ಮನೆಗೂ ಮುತ್ತಿಗೆ ಹಾಕಿದರು.

ಆಗ ಎಚ್ಚೆತ್ತ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು ಉನ್ನತ ಮಟ್ಟದ ಸಮಿತಿ- ಕೇಂದ್ರ ಮತ್ತು ರಾಜ್ಯಗಳ ಪ್ರತಿನಿಧಿಗಳು, ರೈತ ಸಂಘಟನೆಗಳು, ಸಕ್ಕರೆ ಕಾರ್ಖಾನೆಗಳು ಹಾಗೂ ತಜ್ಞರನ್ನು ಒಳಗೊಂಡ ಉನ್ನತ ಮಟ್ಟದ ಜಂಟಿ ಸಮಿತಿ ರಚಿಸುವುದಾಗಿ ಘೋಷಿಸಿದರು. ಉನ್ನತ ಮಟ್ಟದ ಜಂಟಿ ಸಮಿತಿ ರಚನೆ ಘೋಷಣೆ ಬೆಲೆ ಹೆಚ್ಚಳಕ್ಕೆ ಪರಿಹಾರವಲ್ಲ. ಕೃಷಿಕರ ಕಷ್ಟಗಳು ನೀಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಸಮಿತಿಯು ಯಾವಾಗ ವರದಿ ನೀಡುತ್ತದೆ, ಅದರ ಶಿಫಾರಸುಗಳನ್ನು ಸರ್ಕಾರ ಯಾವಾಗ ಒಪ್ಪಿಕೊಳ್ಳುತ್ತದೆ ಮತ್ತು ರೈತರಿಗೆ ಯಾವಾಗ ಬೆಂಬಲ ಬೆಲೆ ಸಿಗುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ.

ಸರ್ಕಾರಗಳು ಕಾಲಕಾಲಕ್ಕೆ ರೈತರ ಹೋರಾಟವನ್ನು ಹತ್ತಿಕ್ಕಲು, ಆಕ್ರೋಶವನ್ನು ತಣಿಸಲು ಸಮಿತಿ ರಚನೆಯಂತಹ ವಂಚನೆಯ ಮಾರ್ಗಗಳನ್ನು ಅಸ್ತ್ರಗಳನ್ನಾಗಿಸಿಕೊಳ್ಳುತ್ತವೆ. ಸಮಿತಿ ಸಭೆ, ಮಾತುಕತೆಗಳ ಮರೆಯಲ್ಲಿ ದಿನದೂಡುವುದು, ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವುದು ಕಾಲದಿಂದ ನಡೆದೇ ಇದೆ. ಇಂತಹ ಮರೆಮೋಸಗಳಿಗೆ ರೈತರು ಬಲಿಯಾಗುತ್ತಿರುವುದೂ ಇದೆ. ಇದಲ್ಲದೆ, ಸಕ್ಕರೆ ಆಮದು ಮತ್ತು ರಫ್ತು ನೀತಿಯಲ್ಲಿಯೂ ಕೇಂದ್ರ ಸರ್ಕಾರ, ವ್ಯಾಪಾರಸ್ಥರ ಮತ್ತು ಕಾರ್ಖಾನೆ ಮಾಲೀಕರ ಪರವಾಗಿದೆ. ರೈತರ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸುತ್ತಿದೆ.

ಇದೆಲ್ಲ ಗೊತ್ತಿದ್ದರೂ ಕಬ್ಬು ಬೆಳೆಗಾರರು, ಹೆಚ್ಚಿನ ಬೆಲೆಗೆ ಸಕ್ಕರೆ ಮಾರಾಟ ಮತ್ತು ಉಪಉತ್ಪನ್ನಗಳಿಂದ ಬರುವ ಲಾಭಾಂಶವನ್ನೇನೂ ಅವರು ಕೇಳುತ್ತಿಲ್ಲ. ಟನ್ ಕಬ್ಬಿಗೆ 3,300ರಿಂದ 3,500ವರೆಗಿರುವ ಈಗಿನ ಬೆಲೆಯನ್ನು 5,500 ರೂ.ಗೆ ಏರಿಸುವಂತೆ ಕೇಳಿಕೊಳ್ಳುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಕೃಷಿ ಕಷ್ಟಗಳನ್ನು ಬಿಡಿಸಿಟ್ಟು ಮನವಿ ಮಾಡಿಕೊಳ್ಳುತ್ತಿದ್ದಾರೆ. ಅಧಿಕಾರದ ಸ್ಥಾನದಲ್ಲಿ ಕೂತವರು, ಕಾಯ್ದೆ-ಕಾನೂನು ಮಾಡುವವರು ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸುವ ಬದಲು, ಪರಸ್ಪರ ದೂರುವುದರಲ್ಲಿ ನಿರತರಾಗಿದ್ದಾರೆ, ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ಕಟಾವಿಗೆ ಬಂದ ನೂರಾರು ಎಕರೆಯ ಕಬ್ಬು ಗದ್ದೆಯಲ್ಲಿ ಒಣಗುತ್ತಿದೆ. ಕಬ್ಬು ಒಣಗಿದರೆ ಇಳುವರಿ ಕಡಿಮೆಯಾಗುತ್ತದೆ. ಇಳುವರಿ ಕಡಿಮೆಯಾದರೆ ಕಾರ್ಖಾನೆ ತಿರಸ್ಕರಿಸುತ್ತದೆ, ಇಲ್ಲವೇ ಕಿಲುಬು ಕಾಸಿಗೆ ಕೇಳುತ್ತದೆ. ಕೆಲವು ಕಡೆ ಬೆಂಕಿಗೆ ಆಹುತಿಯಾಗಿ ಕಣ್ಣೆದುರೇ ಬೆಳೆ ಬೂದಿಯಾಗಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದಾಗಿದೆ. ಸಾಲದ ಕುಣಿಕೆಗೆ ಕೊರಳೊಡ್ಡುವಂತಾಗಿದೆ.

ಇದು ಸಹಜವಾಗಿಯೇ ಕಬ್ಬು ಬೆಳೆಗಾರರ ಸಹನೆಯ ಕಟ್ಟೆಯೊಡೆಯಲು ಕಾರಣವಾಗಿದೆ. ಮಾತುಕತೆ ಮುರಿದುಬಿದ್ದದ್ದರಿಂದ ರೈತ ನಾಯಕರು ಮತ್ತೆ ಪ್ರತಿಭಟನೆಗೆ ಕರೆ ಕೊಟ್ಟಿದ್ದಾರೆ. ಹೆಂಗಸರು, ಮಕ್ಕಳು ಆದಿಯಾಗಿ ಎಲ್ಲರೂ ಮನೆ-ಮಠ ಬಿಟ್ಟು ಗುರ್ಲಾಪೂರ ಕ್ರಾಸ್ ಬಳಿ ಬೀಡುಬಿಟ್ಟಿದ್ದಾರೆ. ಹಿಂದಿನ ವರ್ಷವೂ ರೈತರು ಇದೇ ರೀತಿ ಗುರ್ಲಾಪೂರ ಕ್ರಾಸ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಈ ವರ್ಷವೂ ನ್ಯಾಯಯುತ ಬೆಲೆಗಾಗಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಪ್ರತಿ ಟನ್ ಕಬ್ಬಿಗೆ 5,500 ದರ ನೀಡಬೇಕು ಎಂದು ಆಗ್ರಹಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಹೋರಾಟ ಇದೀಗ ಹೊಸ ರೂಪ ಪಡೆದುಕೊಂಡಿದೆ. ಖೈದಿ ನಂಬರ್ 5500 ಬಟ್ಟೆ ಧರಿಸಿ, ರೈತರು ಜೈಲ್ ಭರೋ ಪಾದಯಾತ್ರೆಗೂ ಮುಂದಾಗಿದ್ದಾರೆ.

ರೈತರನ್ನು ಎದುರು ಹಾಕಿಕೊಂಡ ಸರ್ಕಾರಗಳು ಉಳಿದ ಉದಾಹರಣೆಗಳಿಲ್ಲ. 1980ರಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿದ ಗುಂಡೂರಾಯರ ಸರ್ಕಾರ ಪತನವಾಗಿತ್ತು. 2020-21ರಲ್ಲಿ ಮೂರು ಕರಾಳ ಕಾಯ್ದೆಗಳನ್ನು ಜಾರಿಗೆ ತಂದಿದ್ದ ಮೋದಿಯವರ ಸರ್ಕಾರ, ರೈತರ ಪ್ರತಿಭಟನೆಯ ನಂತರ ಕಾಯ್ದೆಗಳನ್ನು ವಾಪಸ್ ಪಡೆದಿತ್ತು. ಅಧಿಕಾರಸ್ಥರಿಗೆ ಇತಿಹಾಸದ ಅರಿವಿದ್ದರೆ, ಕಬ್ಬು ಬೆಳೆಗಾರರ ಬಿಕ್ಕಟ್ಟನ್ನು ಬಗೆಹರಿಸಲಿ. ಆಗದಿದ್ದರೆ, ಅಧಿಕಾರ ಬಿಟ್ಟು ತೊಲಗಲಿ.

ಸ್ಟಿಂಗ್ ಸರ್ಕಸ್ ಬೇಳೆ ಬೇಯಿಸಿಕೊಂಡವರಾರೋ, ಸಂತ್ರಸ್ತರಾರೋ!

ರಾಜ್ಯಾದ್ಯಂತ ಈಗ ಭಾರೀ ಸದ್ದು ಮಾಡುತ್ತಿರುವ ಸ್ಟಿಂಗ್ ಆಪರೇಷನ್ ಪ್ರಕರಣವು ಹೊಸ ಪರ-ವಿರೋಧ ಚರ್ಚೆಗಳಿಗೆ ವೇದಿಕೆ ಸೃಷ್ಟಿಸಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಕುಗ್ಗಿಸಲು ಮತ್ತು ಅವರ ತೇಜೋವಧೆ ಮಾಡಲೆಂದೇ ಈ ರಹಸ್ಯ ಕಾರ್ಯಾಚರಣೆ ನಡೆಸಲಾಗಿದೆ ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ತೀವ್ರ ಕಾವು ಪಡೆದುಕೊಂಡಿವೆ. ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಈ ಕುರಿತು ಪರಸ್ಪರ ಕೌಂಟರ್ ಹೇಳಿಕೆಗಳನ್ನು ನೀಡುತ್ತಾ, ಎದುರಾಳಿಗಳತ್ತ ಬೊಟ್ಟು ಮಾಡುತ್ತಾ ತಮ್ಮ ಸ್ವಹಿತಾಸಕ್ತಿಯ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದಲ್ಲಿ ನಿರತರಾಗಿದ್ದಾರೆ.

ಆದರೆ, ಈ ಜಟಾಪಟಿಯಲ್ಲಿ ಪರಸ್ಪರರ ಮೇಲೆ ಆರೋಪಗಳನ್ನು ಹೊರಿಸಲಾಗುತ್ತಿದೆ. ಪ್ರಸಾರ ಹೆಚ್ಚಿಸಿಕೊಳ್ಳುವ ಭರದಲ್ಲಿ ಮಾಧ್ಯಮಗಳು ನಡೆಸುವ ಇಂತಹ ರಹಸ್ಯ ಕಾರ್ಯಾಚರಣೆಗಳು ಪತ್ರಿಕೋದ್ಯಮದ ನೈತಿಕತೆಯನ್ನೇ ಪ್ರಶ್ನಿಸುವಂತೆ ಮಾಡಿವೆ ಮತ್ತು ಸಮಾಜದ ಮೇಲೆ ಇದು ಬೀರುತ್ತಿರುವ ದುಷ್ಪರಿಣಾಮಗಳ ಬಗ್ಗೆ ಯಾರೂ ಗಂಭೀರವಾಗಿ ಆಲೋಚಿಸುತ್ತಿಲ್ಲ.

ಈ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನ ಗುರಿಯಾಗಿಸಿಕೊಂಡು ದೃಶ್ಯಾವಳಿಗಳನ್ನು ಚಿತ್ರೀಕರಿಸಲಾಗಿದೆ ಎಂಬ ಸುದ್ದಿಗಳು ಹೊರಬಿದ್ದ ತಕ್ಷಣವೇ ರಾಜಕೀಯ ವಲಯದಲ್ಲಿ ಸಂಚಲನ ಮೂಡಿತು. ಸಿದ್ದರಾಮಯ್ಯ ಅವರ ರಾಜಕೀಯ ವರ್ಚಸ್ಸಿ ಗೆ ಧಕ್ಕೆ ತರಲು ಮತ್ತು ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೆಣೆದ ತಂತ್ರವಿದು ಎಂದು ಕಾಂಗ್ರೆಸ್ ನಾಯಕರು ಆರೋಪಿಸಿ, ಪ್ರತಿಭಟನೆ ಹಾಗೂ ತನಿಖೆಗೆ ಪಟ್ಟು ಹಿಡಿದರು.

ಮತ್ತೊಂದೆಡೆ, ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಪ್ರಕರಣದ ಸತ್ಯಾಸತ್ಯತೆ ಹೊರಬರಬೇಕು, ಘಟನೆಯಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಇದಕ್ಕೆಲ್ಲಾ ಸರ್ಕಾರವೇ ಹೊಣೆ ಎಂದು ಸರಣಿ ಪತ್ರಿಕಾಗೋಷ್ಠಿಗಳನ್ನು ನಡೆಸಿ ವಾಗ್ದಾಳಿ ನಡೆಸಿದರು. ಈ ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆಯೇ ಪ್ರಕರಣಕ್ಕೆ ಕಾನೂನು ಮತ್ತು ತನಿಖಾ ಹಂತದ ಹೊಸ ಆಯಾಮ ದೊರೆಯಿತು. ಸಾರ್ವಜನಿಕವಾಗಿ ಪರ-ವಿರೋಧದ ಚರ್ಚೆ, ಹೇಳಿಕೆಗಳ ಮಹಾಪೂರವೇ ಹರಿಯಿತು.

ಆದರೆ, ಈ ಎಲ್ಲಾ ರಾಜಕೀಯ ಆರೋಪ-ಪ್ರತ್ಯಾರೋಪಗಳ ನಡವೆಯೂ ಈ ಕಾರ್ಯಾಚರಣೆಗೆ ಬಳಸಿಕೊಳ್ಳಲಾದ ಮಹಿಳೆಯ ಮೂಲ ಅಸ್ತಿತ್ವ ಮತ್ತು ಆಕೆಯ ಸ್ಥಿತಿಗತಿಯ ಬಗ್ಗೆ ಮಾತ್ರ ಯಾವುದೇ ಚರ್ಚೆ ನಡೆಯಲಿಲ್ಲ.

ರಾಜ್ಯದಲ್ಲಿ ಗುಪ್ತಚರ ಇಲಾಖೆ ಕಣ್ಗಾವಲು ಅಥವಾ ಫೋನ್ ಟ್ಯಾಪಿಂಗ್‌ನಂತಹ ರಾಜಕೀಯ ವಿರೋಧಿಗಳನ್ನು ಹಣಿಯುವ ತಂತ್ರಗಳು ಹೊಸದೇನಲ್ಲ. ಆದರೆ ಸ್ವಾರ್ಥ ರಾಜಕಾರಣಕ್ಕಾಗಿ ಮತ್ತು ಅಧಿಕಾರದಾಹಕ್ಕಾಗಿ ನೇರವಾಗಿ ಒಬ್ಬ ಮಹಿಳೆಯನ್ನು ಮುಂಚೂಣಿಗೆ ತಳ್ಳಿ, ಆಕೆಯ ಬದುಕನ್ನೇ ಪಣಕ್ಕಿಟ್ಟು ಸ್ಟಿಂಗ್ ಆಪರೇಷನ್ ನಡೆಸಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಸಮಾಜದಲ್ಲಿ ಹೆಣ್ಣೆಂದರೆ ಕೇವಲ ಭೋಗದ ವಸ್ತುವಾ?



ಸ್ವಾರ್ಥ ಸಾಧನೆಗೆ ಬಳಸಿ, ಕೆಲಸ ಮುಗಿದ ಮೇಲೆ ಕಸದಂತೆ ಬಿಸಾಡುವ ವಸ್ತುವಾ? ಎಂಬ ಆಕ್ರೋಶಗಳು ವ್ಯಕ್ತವಾಗುತ್ತಿವೆ.

ಆಕೆಯ ಘನತೆ, ಆತ್ಮವಿಶ್ವಾಸ ಮತ್ತು ಅದೆಷ್ಟೋ ಕನಸುಗಳನ್ನು ಕೇವಲ ರಾಜಕೀಯ ಬಲಿಪಶುವಾಗಿ ಬಲಿ ಕೊಡುತ್ತಿರುವುದು ಯಾವ ನ್ಯಾಯ? ಆಕೆಯ ಅಸಹಾಯಕತೆಯನ್ನು ಬಂಡವಾಳ ಮಾಡಿಕೊಂಡಿರುವ ಈ ಸಮಾಜದ ಕ್ರೌರ್ಯ ಕಂಡು ಜುಗುಪ್ಸೆ ಮೂಡುತ್ತದೆ. ಈ ಇಡೀ ಪ್ರಕರಣದಲ್ಲಿ ಅತ್ಯಂತ ಕಳವಳಕಾರಿ ಸಂಗತಿಯೆಂದರೆ, ಅಸ್ತ್ರವಾಗಿ ಬಳಕೆಯಾಗಿರುವ ಮಹಿಳೆಯ ಸಂಕಟ, ನೋವು ಮತ್ತು ಅಸಹಾಯಕತೆಯ ಕುರಿತು ಯಾವೊಬ್ಬ ನಾಯಕನೂ ಧ್ವನಿ ಎತ್ತದಿರುವುದು. ಆಕೆಯ ಪರವಾಗಿ ನಿಂತು ನ್ಯಾಯ ಕೇಳಲು ಮುಂದೆ ಬರದಿರುವುದು ಈ ಸಮಾಜದ ಅತಿ ದೊಡ್ಡ ವಿಪರ್ಯಾಸ.

ಈಗಿನ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸೂಕ್ತ ರಾಜಕೀಯ, ಸಾಮಾಜಿಕ ಪ್ರಾತಿನಿಧ್ಯವೇ ಸಿಗದಂತಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಿರುವ ಮಹಿಳೆಯರಿಗೆ ತಕ್ಕ ಸ್ಥಾನಮಾನಗಳು ಸಿಗದಿರುವುದು ಒಂದೆಡೆಯಾದರೆ, ರಾಜಕೀಯ ಲಾಭಕ್ಕಾಗಿ ಅವರನ್ನು ಕುಗ್ಗಿಸುವ ಹಾಗೂ ದುರುಪಯೋಗಪಡಿಸಿಕೊಳ್ಳುವ ಯತ್ನಗಳು ಇನ್ನೊಂದೆಡೆ ನಿರಂತರವಾಗಿ ನಡೆಯುತ್ತಿವೆ.

ಪ್ರಾತಿನಿಧಿತ್ವದ ಕೊರತೆಯ ನಡುವೆಯೂ ರಾಜಕೀಯಕ್ಕೆ ಅಥವಾ ಸಮಾಜದ ಮುಖ್ಯವಾಹಿನಿಗೆ ಬರಬಯಸುವ ಮಹಿಳೆಯರಿಗೆ, ಇಂತಹ ವಾತಾವರಣವು ಭೀತಿ ಹುಟ್ಟುಹಾಕುತ್ತದೆ. ಮಹಿಳೆಯನ್ನು ಅಸ್ತ್ರವಾಗಿ ಬಳಸಿ ಬ್ಲ್ಯಾಂಡ್ ಮಾಡುವುದು ಮತ್ತು ಅವರ ಅವಕಾಶಗಳನ್ನು ತಡೆದು ತುಳಿಯುವುದು ನೇರವಾಗಿ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಉದ್ದೇಶ ಎಷ್ಟೇ ಒಳ್ಳೆಯದಿರಲಿ, ಬಳಸುವ ಸಾಧನಗಳು ಅಸಹ್ಯಕರವಾಗಿದ್ದರೂ ಗುರಿ ಸಾಧನೆಯನ್ನು ಸಮರ್ಥಿಸುತ್ತದೆಯೇ ಎಂಬ ಪ್ರಶ್ನೆ ಇಂದು ಗಂಭೀರವಾಗಿ ಕಾಡುತ್ತಿದೆ. ಒಬ್ಬ ಅಪರಾಧಿಯನ್ನು ಅಥವಾ ಭ್ರಷ್ಟನನ್ನು ಹಿಡಿಯುವ ಭರದಲ್ಲಿ ಪತ್ರಕರ್ತರು ಅಥವಾ ಸ್ಟಿಂಗ್ ಆಪರೇಟರ್‌ಗಳು ಸ್ವತಃ ಕಾನೂನುಬಾಹಿರ ಎನಿಸುವ, ಅತಿರೇಕದ ಚಟುವಟಿಕೆಗಳಿಗೆ ಕೈಹಾಕುವುದು ಎಷ್ಟು ಸರಿ? ಹಿಂದೆ ಕೆಲವು ನಿಯತಕಾಲಿಕೆಗಳು ವೇಶ್ಯೆಯರನ್ನು ಬಳಸಿ ಅಧಿಕಾರಿಗಳನ್ನು ಬಲೆಗೆ ಕೆಡವಿದ ನಿದರ್ಶನಗಳಿವೆ. ಆದರೆ, ತಪ್ಪೇ ಮಾಡದ ವ್ಯಕ್ತಿಗಳನ್ನು ಅಥವಾ ಅಸಹಾಯಕರನ್ನು ಬ್ಲ್ಯಾಕ್‌ಮೇಲ್ ತಂತ್ರಗಳಿಗೆ ಬಲಿಕೊಡುವುದು ಯಾವ ನಾಗರಿಕ ಸಮಾಜದ ಲಕ್ಷಣವೂ ಅಲ್ಲ.

ಇಂತಹ ಸಂವೇದನಾಶೀಲ ಹಾಗೂ ವಿಕೃತ ವರದಿಗಾರಿಕೆಗಾಗಿ ಕಾನೂನುಬಾಹಿರ ಮಾರ್ಗಗಳನ್ನು ಬಳಸುವುದು ಪತ್ರಿಕೋದ್ಯಮದ ಲಕ್ಷಣವಲ್ಲ. ಅಪರಾಧಿಗಳನ್ನು ಪತ್ತೆಹಚ್ಚಲು ಕಾನೂನು ಜಾರಿ ಏಜೆನ್ಸಿ ಗಳಿಗೆ ವಿಶೇಷ ಅಧಿಕಾರವಿರಬಹುದೇ ಹೊರತು, ಸ್ವಾರ್ಥ ರಾಜಕಾರಣಕ್ಕಾಗಿ ಹೆಣ್ಣಿನ ಜೀವನದೊಂದಿಗೆ ಚೆಲ್ಲಾಟವಾಡುವ ಹಕ್ಕು ಯಾರಿಗೂ ಇಲ್ಲ.

ಮಹಿಳಾ ಮೀಸಲಾತಿ, ಮಹಿಳಾ ಸಬಲೀಕರಣ ಹಾಗೂ ಸಮಾನತೆಯ ಬಗ್ಗೆ ದೊಡ್ಡ ಭಾಷಣ ಬಿಗಿಯುವ ಸರ್ಕಾರ, ರಾಜಕೀಯ ಪಕ್ಷಗಳು ಹಾಗೂ ಸಮಾಜ ಇಂತಹ ಪ್ರಕರಣಗಳಲ್ಲಿ ಮೌನ ವಹಿಸುವುದು ಅಪರಾಧಕ್ಕೆ ಸಮಾನ. ರಾಜಕೀಯ ನಾಯಕರ ತೇಜೋವಧೆ ಅಥವಾ ಅಧಿಕಾರದ ಲೆಕ್ಕಾಚಾರಕ್ಕಿಂತ ಮಿಗಿಲಾಗಿ, ಈ ಸ್ಟಿಂಗ್ ಆಪರೇಷನ್‌ನಲ್ಲಿ ಬಲಿಯಾದ ಆ ಅನಾಮಧೇಯ ಮಹಿಳೆಯ ಘನತೆ ಮತ್ತು ಆಕೆಗೆ ಆಗಿರುವ ಅನ್ಯಾಯದ ಕುರಿತು ಸಮಾಜ ಹಾಗೂ ರಾಜಕೀಯ ವ್ಯವಸ್ಥೆ ತೀವ್ರ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಅಧಿಕಾರದ ಮದದಲ್ಲಿ ತೇಲಾಡುತ್ತಿರುವವರು, ಇಂತಹ ಅಸಹ್ಯ ರಾಜಕೀಯಕ್ಕೆ ಇನ್ನುಳಿದು ಎಷ್ಟು ಜೀವಗಳು ಬಲಿಯಾಗಬೇಕು ಎಂಬ ಪ್ರಶ್ನೆಗೆ ಉತ್ತರಿಸಬೇಕಿದೆ. ಹೆಣ್ಣನ್ನು ಕೇವಲ ದಾಳವನ್ನಾಗಿ ಬಳಸುವ ಈ ವಿಕೃತ ಸಂಸ್ಕೃತಿಗೆ ಈಗಲಾದರೂ ಸಂಪೂರ್ಣವಾಗಿ ತಿಲಾಂಜಲಿ ಹಾಡಬೇಕಿದೆ.

ರಾಜಧಾನಿಯಲ್ಲಿ ಖಾಕಿ-ಕಪ್ಪು ಕೋಟ್ ಸಮರ; ಒಳಗಿದ್ದ ಹುಳುಕನ್ನು ಬೀದಿಗೆ ತಂದಿತೇ ಪೊಲೀಸರ ಪ್ರತಿಭಟನೆ?

ಒಂದು ಸಣ್ಣ ಪಾರ್ಕಿಂಗ್ ವಿವಾದದಿಂದ ಆರಂಭವಾದ ಈ ಜಗಳ, ಪೊಲೀಸ್ ಠಾಣೆಯೊಳಗೇ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿ, ಅಂತಿಮವಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ಅಮಾನತು ಮತ್ತು ವರ್ಗಾವಣೆಯಲ್ಲಿ ಅಂತ್ಯಗೊಂಡಿದೆ. ಈ ಹೊತ್ತಿನಲ್ಲಿ ಈ ಇಡೀ ಬೆಳವಣಿಗೆಯ ಚಿತ್ರಣ, ಘಟನೆಯ ಹಿನ್ನೆಲೆ ಮತ್ತು ಇದರಿಂದ ಆಡಳಿತ ವ್ಯವಸ್ಥೆಯ ಮೇಲಾಗಿರುವ ಪರಿಣಾಮಗಳನ್ನು ಚರ್ಚಿಸುವುದು ಅಗತ್ಯ.

ಒಂದೆಡೆ ಸಾಲು ಸಾಲು ಪ್ರತಿಭಟನೆಗಳು, ಧರಣಿಗಳು, ರ್ಯಾಲಿಗಳ ಧೂಳೆಬ್ಬಿಸುತ್ತಿರುವಾಗಲೇ, ರಾಜಧಾನಿಯ ಭದ್ರತೆಯ ಹೊಣೆ ಹೊತ್ತ ಪೊಲೀಸರು ಬೀದಿಗಿಳಿದು ಧರಣಿ ಕುಳಿತ್ತಿರುವ ಅಪರೂಪದ ಹಾಗೂ ಕಳವಳಕಾರಿ ಘಟನೆಗೆ ರಾಜಧಾನಿ ದೆಹಲಿ ಸಾಕ್ಷಿಯಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸರು ಮತ್ತು ನ್ಯಾಯಾಲಯಗಳಲ್ಲಿ ನ್ಯಾಯಕ್ಕಾಗಿ ವಾದಿಸಬೇಕಾದ ವಕೀಲರ ನಡುವಿನ ಸಂಘರ್ಷ ಈಗ ಬೀದಿ ರಂಪಾಟಕ್ಕೆ ತಿರುಗಿದ್ದು, ನೂರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ತಮ್ಮದೇ ಪ್ರಧಾನ ಕಚೇರಿಯ () ಮುಂದೆ ಪ್ರತಿಭಟನೆ ನಡೆಸಿದ್ದಾರೆ.

ಕತೆ ಶುರುವಾಗಿದ್ದು ಎಲ್ಲಿಂದ?

ಈ ಇಡೀ ಗಲಾಟೆಯ ಹಿನ್ನೆಲೆ ನೋಡುವುದಾದರೆ, ಈಶಾನ್ಯ ದೆಹಲಿಯ ರೋಹತಾಶ್ ನಗರದ ಸಲೂನ್ ಒಂದರ ಹೊರಗಡೆ ನಡೆದ ತೀರಾ ಸಾಮಾನ್ಯ ಪಾರ್ಕಿಂಗ್ ವಿವಾದವೊಂದು ತೆರೆದುಕೊಳ್ಳುತ್ತದೆ. ಅಕ್ಟೋಬರ್ 23 ರಂದು ಬೆಳಿಗ್ಗೆ 11 ಗಂಟೆಯ ಸುಮಾರಿಗೆ ಶೀತಲ್ ಠಾಕೂರ್ ಮತ್ತು ಆಕೆಯ ಪತಿ ರಾಹುಲ್ ತಮ್ಮ ಸಲೂನ್ ಬಾಗಿಲಿಗೆ ಅಡ್ಡಲಾಗಿ ನಿಲ್ಲಿಸಿದ್ದ ಬೈಕನ್ನು ತೆರವುಗೊಳಿಸುವಂತೆ ಸವಾರನಿಗೆ ಕೋರಿದ್ದಾರೆ. ಈ ವೇಳೆ ಇಬ್ಬರ ನಡುವೆ ಜಗಳ ಆರಂಭವಾಗಿದೆ.

ಶೀತಲ್ ಅವರ ಕುಟುಂಬದವರ ಆರೋಪದಂತೆ, ಮಾತಿಗೆ ಮಾತು ಬೆಳೆದು ಕೆಲವೇ ಗಂಟೆಗಳಲ್ಲಿ ವಕೀಲರ ಗುಂಪೊಂದು ಸಲೂನ್‌ಗೆ ನುಗ್ಗಿದೆ. ಪೀಠೋಪಕರಣಗಳನ್ನ ಧ್ವಂಸಗೊಳಿಸಿದೆ. ಎಂಟು ತಿಂಗಳ ಗರ್ಭಿಣಿಯಾಗಿದ್ದ ಶೀತಲ್ ಮೇಲೆಯೂ ಹಲ್ಲೆ ನಡೆಸಲಾಗಿದೆ. ಇದಾದ ನಂತರ ಕುಟುಂಬಸ್ಥರು ಶಹದರಾ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ, ಠಾಣೆಯ ಒಳಗಡೆಯೇ ವಕೀಲರು ಮತ್ತೆ ದೂರುದಾರರ ಮೇಲೆ ದಾಳಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಗಲಾಟೆಯಲ್ಲಿ ಲಲಿತ್ ಬನ್ಸಾಲ್ ಎಂಬ ವಕೀಲರ ತಲೆಗೆ ತೀವ್ರ ಪೆಟ್ಟಾಗಿದೆ. ಈ ಸಂಬಂಧ ದೂರು ನೀಡಿದರೂ ಪೊಲೀಸರು ಆರೋಪಿ ರಾಹುಲ್‌ನನ್ನು ಬಂಧಿಸದೆ ಬಿಡುಗಡೆ ಮಾಡಿದ್ದಾರೆ ಎಂದು ವಕೀಲರು ಆರೋಪಿಸಿದ್ದಾರೆ. ಅಲ್ಲದೆ, ಮಾನಸ್ವಿ ವಸಿಷ್ಠ ಅವರು ತಮಗೆ ಪಿಸ್ತೂಲ್ ತೋರಿಸಿ ಬೆದರಿಕೆ ಹಾಕಿದ್ದಾರೆ ಎಂದು ವಕೀಲರ ಸಂಘಟನೆ ಗಂಭೀರ ಆರೋಪ ಮಾಡಿದೆ.

ಅಕ್ಟೋಬರ್ 24ರಂದು ಪ್ರಕರಣ ಮತ್ತೊಂದು ತಿರುವು ಪಡೆದುಕೊಂಡಿತು. ಹಲ್ಲೆ ಪ್ರಕರಣದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ವಕೀಲರು ಶಾಹದಾರ ಪೊಲೀಸ್ ಠಾಣೆಗೆ ಆಗಮಿಸಿದರು. ಈ ವೇಳೆ ಸಹಾಯಕ ಪೊಲೀಸ್ ಆಯುಕ್ತ () ಮನಸ್ವಿ ವಶಿಷ್ಠ ಮತ್ತು ಠಾಣಾಧಿಕಾರಿ () ಇನ್ಸ್‌ಪೆಕ್ಟರ್ ಅರುಣ್ ಕುಮಾರ್ ಅವರೊಂದಿಗೆ ವಕೀಲರ ಮಾತಿನ ಚಕಮಕಿ ನಡೆದಿದೆ.

ವಕೀಲರ ಸಂಘಟನೆ ನೀಡಿರುವ ವಿವರಣೆಯ ಪ್ರಕಾರ,



ಆರೋಪಿಗಳನ್ನು ಬಂಧಿಸುವುದಾಗಿ ಪೊಲೀಸರು ಭರವಸೆ ನೀಡಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಆರೋಪಿಗಳನ್ನು ಬಿಡುಗಡೆ ಮಾಡಲಾಗಿದೆ ಎಂಬ ಮಾಹಿತಿಯೂ ವಕೀಲರಿಗೆ ಲಭ್ಯವಾಗಿತ್ತು. ಇದನ್ನು ಪ್ರಶ್ನಿಸಲು ಠಾಣೆಗೆ ಹೋದಾಗ ಎಸಿಪಿ ಮನಸ್ವಿ ವಶಿಷ್ಠ ತಮ್ಮ ರಿವಾಲ್ವರ್ ಪ್ರದರ್ಶಿಸಿ ವಕೀಲರನ್ನು ಬೆದರಿಸಿದ್ದಾರೆ ಎಂಬುದು ವಕೀಲರ ಗಂಭೀರ ಆರೋಪ. ಇದಕ್ಕೆ ವಿರುದ್ಧವಾಗಿ ಎಸಿಪಿ ವಶಿಷ್ಠ ನೀಡಿದ ದೂರಿನಲ್ಲಿ, ಸುಮಾರು 15ರಿಂದ 20 ವಕೀಲರು ಠಾಣಾಧಿಕಾರಿಯ ಕೊಠಡಿಗೆ ನುಗ್ಗಿ ಪೊಲೀಸರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ. ತನಿಖೆಯಲ್ಲಿ ಲಂಚ ಸ್ವೀಕರಿಸಿ ಆರೋಪಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ವಕೀಲರು ಆರೋಪಿಸಿದ್ದು, ಅಧಿಕಾರಿಗಳಿಗೆ ಕೆಲಸ ಮಾಡಲು ಅಡ್ಡಿಪಡಿಸಿದ್ದಾರೆ ಎನ್ನಲಾಗಿದೆ. ಒಬ್ಬ ವಕೀಲರು ಎಸ್‌ಎಚ್‌ಒ ಅವರ ಕೈ ಹಿಡಿದು ಎಳೆಯಲು ಯತ್ನಿಸಿದ್ದಾರೆ ಎಂಬ ಆರೋಪವೂ ದೂರಿನಲ್ಲಿದೆ.

ಘಟನೆಯ ನಂತರ ವಕೀಲರ ಸಂಘಟನೆಯು ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿ, ಎಸಿಪಿ ಹಾಗೂ ಎಸ್‌ಎಚ್‌ಒ ಅಮಾನತಿಗೆ ಪಟ್ಟು ಹಿಡಿಯಿತು. ವಕೀಲರ ಒತ್ತಡಕ್ಕೆ ಮಣಿದ ಆಡಳಿತ ಮಂಡಳಿ ಅಕ್ಟೋಬರ್ 28 ರಂದು ಎಸಿಪಿ ಮಾನಸ್ವಿ ವಸಿಷ್ಠ ಮತ್ತು ಎಸ್‌ಎಚ್‌ಒ ಅರುಣ್ ಕುಮಾರ್ ಅವರನ್ನು ದೆಹಲಿಯ ಬೇರೆ ಬೇರೆ ವಿಭಾಗಗಳಿಗೆ ವರ್ಗಾವಣೆ ಮಾಡಿತು.

ತಮ್ಮ ಮೇಲಧಿಕಾರಿಗಳು ಮತ್ತು ಸಹೋದ್ಯೋಗಿಗಳು ನಿಷ್ಠೆಯಿಂದ ಕೆಲಸ ಮಾಡಿದ್ದರೂ, ರಾಜಕೀಯ ಹಾಗೂ ವಕೀಲರ ಒತ್ತಡಕ್ಕೆ ಸಿಲುಕಿ ಬಲಿಯಾಗುತ್ತಿದ್ದಾರೆ ಎಂದು ಆಕ್ರೋಶಗೊಂಡ ಸುಮಾರು 150ಕ್ಕೂ ಹೆಚ್ಚು ಪೊಲೀಸರು ನವೆಂಬರ್ 2 ರಂದು ದೆಹಲಿ ಪೊಲೀಸ್ ಪ್ರಧಾನ ಕಚೇರಿಯ ಗೇಟ್ ನಂ. 1 ರ ಮುಂದೆ ಧರಣಿ ಕುಳಿತರು. ''ಖಾಕಿಗೆ ಗೌರವ ಕೊಡಿ'', ''ನಾವು ಪಂಚಿಂಗ್ ಬ್ಯಾಗ್ ಅಲ್ಲ'' ಎಂಬ ಬ್ಯಾನರ್‌ಗಳನ್ನು ಹಿಡಿದು, ತಮ್ಮದೇ ಕಮಿಷನರ್ ವಿರುದ್ಧ ಹಾಗೂ ವಕೀಲರ ಗೂಂಡಾಗಿರಿಯ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯಲ್ಲಿ ನಿರತರಾಗಿದ್ದ ಪೊಲೀಸರು, ಪ್ರಧಾನ ಕಚೇರಿಯ ಹಿರಿಯ ಅಧಿಕಾರಿಗಳು ಹಾಗೂ ಕಮಿಷನರ್ ಅನುರಾಗ್ ಕುಮಾರ್ ಅವರನ್ನು ಭೇಟಿಯಾಗಿ 5 ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು.

ವಕೀಲರ ವಿರುದ್ಧ ಎಸಿಪಿ ವಸಿಷ್ಠ ನೀಡಿದ ದೂರಿನ ಆಧಾರದಲ್ಲಿ ದಾಖಲಾಗಿರುವ ಎಫ್‌ಐಆರ್ ಅನ್ನು ಯಾವುದೇ ಕಾರಣಕ್ಕೂ ರದ್ದುಗೊಳಿಸಬಾರದು, ಪೊಲೀಸರ ಸಮಸ್ಯೆಗಳನ್ನು ಆಲಿಸಲು ಮತ್ತು ಅವರಿಗೆ ಆಗುವ ಅನ್ಯಾಯಗಳನ್ನು ತಡೆಯಲು ಪ್ರತ್ಯೇಕ ಸಮಿತಿ ರಚಿಸಬೇಕು, ವಕೀಲರು ಮತ್ತು ಪೊಲೀಸರ ನಡುವೆ ಸಂಘರ್ಷ ಉಂಟಾದಾಗ ನಿರ್ವಹಣೆ ಮಾಡಲು ನಿರ್ದಿಷ್ಟ ಕಾರ್ಯವಿಧಾನ () ರೂಪಿಸಬೇಕು, ಪೊಲೀಸ್ ಅಧಿಕಾರಿಯ ಕೊಠಡಿಗೆ ಒಂದೇ ಬಾರಿಗೆ ಹೆಚ್ಚಿನ ಸಂಖ್ಯೆಯ ವಕೀಲರು ನುಗ್ಗದಂತೆ ನಿಯಂತ್ರಣ ಹೇರಬೇಕು ಹಾಗೂ ಕೋರ್ಟ್ ಆವರಣ ಹಾಗೂ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಮನವಿ ಮಾಡಿದರು.

ಉನ್ನತ ಸ್ಥಾನದಲ್ಲಿರುವ ಪೊಲೀಸ್ ಪಡೆಯೇ ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ಬಂದಿರುವುದು ಸಾರ್ವಜನಿಕರಲ್ಲಿ ತೀವ್ರ ಆತಂಕ ಮೂಡಿಸಿದೆ. ವಿದ್ಯಾರ್ಥಿ ಸಂಘಟನೆ ಯ ಅಧ್ಯಕ್ಷೆ ನೇಹಾ ಬೋರಾ ಈ ಬಗ್ಗೆ ಪ್ರತಿಕ್ರಿಯಿಸುತ್ತಾ, ''ದೆಹಲಿ ಪೊಲೀಸ್ ಪ್ರಧಾನ ಕಚೇರಿಯಿರುವ ಪ್ರದೇಶದಲ್ಲಿ ಬಿಎನ್‌ಎಸ್ () ಕಾಯ್ದೆಯ ಸೆಕ್ಷನ್ 163ರಡಿ ನಿಷೇಧಾಜ್ಞೆ ಜಾರಿಯಲ್ಲಿದೆ. ಹಾಗಿದ್ದ ಮೇಲೆ ಧರಣಿ ಕುಳಿತ ಪೊಲೀಸರ ವಿರುದ್ಧವೇ ಪೊಲೀಸರು ಎಫ್‌ಐಆರ್ ದಾಖಲಿಸುತ್ತಾರೆಯೇ? ಇದು ಕುಸಿದುಬಿದ್ದಿರುವ ವ್ಯವಸ್ಥೆಯ ಸಂಕೇತ,'' ಎಂದು ಕಿಡಿಕಾರಿದ್ದಾರೆ.

ಇನ್ನೊಂದೆಡೆ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಎಸಿಪಿ ಮಾನಸ್ವಿ ವಸಿಷ್ಠ ಅವರನ್ನು ಘಟನೆಯ ಮರುದಿನವೇ ಅಮಾನತುಗೊಳಿಸಲಾಗಿದೆ. ಆದರೆ, ಅಮಾನತಿಗೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಮಾನಸ್ವಿ, ''ಪೊಲೀಸ್ ಠಾಣೆಗಳೇ ಸುರಕ್ಷಿತವಾಗಿರದಿದ್ದರೆ, ಈ ನಗರದಲ್ಲಿ ಇನ್ಯಾವ ಜಾಗ ಸುರಕ್ಷಿತವಾಗಿರಲು ಸಾಧ್ಯ? ನಮಗೆ ಅನ್ಯಾಯವಾಗಿದೆ, ನಾವು ನಮಗಾಗಿ ದ್ವನಿ ಎತ್ತುತ್ತಿದ್ದೇವೆ'' ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದರು.

ದೆಹಲಿಯಲ್ಲಿ ಪೊಲೀಸರು ಮತ್ತು ವಕೀಲರ ನಡುವೆ ಹೀಗೆ ಬೀದಿ ಕಾಳಗ ನಡೆಯುತ್ತಿರುವುದು ಇದೇ ಮೊದಲೇನಲ್ಲ. 2019 ರಲ್ಲಿ ದೆಹಲಿಯ ತೀಸ್ ಹಜಾರಿ ಕೋರ್ಟ್ ಆವರಣದಲ್ಲಿಯೂ ಸಹ ಇಂತಹುದೇ ಒಂದು ಸಣ್ಣ ಪಾರ್ಕಿಂಗ್ ವಿವಾದದಿಂದಾಗಿ ವಕೀಲರು ಮತ್ತು ಪೊಲೀಸರ ನಡುವೆ ಭಾರಿ ಹಿಂಸಾಚಾರ ನಡೆದಿತ್ತು. ಅಂದು 20ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದರು. ಆ ಘಟನೆಯನ್ನು ಖಂಡಿಸಿ 2,000ಕ್ಕೂ ಹೆಚ್ಚು ಪೊಲೀಸರು ಹಾಗೂ ಅವರ ಕುಟುಂಬಸ್ಥರು ದೆಹಲಿ ಪೊಲೀಸ್ ಪ್ರಧಾನ ಕಚೇರಿಯ ಮುಂದೆ ಇಡೀ ದಿನ ಪ್ರತಿಭಟನೆ ನಡೆಸಿದ್ದರು.

ಖಾಕಿ ಸಮವಸ್ತ್ರ ಧರಿಸಿದ ಮಾತ್ರಕ್ಕೆ ತಮ್ಮ ಮೇಲಾಗುವ ದೌರ್ಜನ್ಯಗಳನ್ನು ಸಹಿಸಿಕೊಳ್ಳಬೇಕೇ ಎಂಬ ಪ್ರಶ್ನೆ ಅಂದೂ ಎದ್ದಿತ್ತು, ಇಂದೂ ಎದ್ದಿದೆ. ಏಳು ವರ್ಷಗಳ ನಂತರ ಮತ್ತೆ ಅದೇ ಮಾದರಿಯ ಪಾರ್ಕಿಂಗ್ ರಾದ್ಧಾಂತವು ರಾಜಧಾನಿಯಲ್ಲಿ ಖಾಕಿ ಮತ್ತು ಕಪ್ಪು ಕೋಟ್‌ಗಳ ನಡುವೆ ಯುದ್ಧಕ್ಕೆ ಕಾರಣವಾಗಿದೆ. ಪೊಲೀಸರು ಶಿಸ್ತಿನ ಪಡೆ. ಅವರು ಬೀದಿಗಿಳಿದು ಪ್ರತಿಭಟನೆ ಮಾಡುವುದು ಶಿಸ್ತುಭಂಗ ಎನಿಸಿಕೊಂಡರೂ, ಅವರು ಯಾವ ರೀತಿಯ ಅಭದ್ರತೆ ಮತ್ತು ಆಕ್ರೋಶಕ್ಕೆ ಒಳಗಾಗಿದ್ದಾರೆ ಎಂಬುದನ್ನೂ ಪರಿಶೀಲಿಸುವುದು ಮುಖ್ಯ. ಕಾನೂನು ಪಾಲಕರು ಮತ್ತು ಕಾನೂನು ರಕ್ಷಕರ ನಡುವಿನ ಈ ವೈಮನಸ್ಸು , ಸಾಮಾನ್ಯ ಜನರಿಗೆ ಕಾನೂನಿನ ಮೇಲಿರುವ ನಂಬಿಕೆಯನ್ನು ಕರಗುವಂತೆ ಮಾಡದಿರಲಿ.

ರಾಜಕೀಯ ಲಾಭ-ನಷ್ಟ ಅಥವಾ ಒತ್ತಡಗಳಿಗೆ ಮಣಿಯದೆ, ತಪ್ಪು ಯಾರೇ ಮಾಡಿದ್ದರೂ ಅದು ವಕೀಲರಾಗಿರಲಿ ಅಥವಾ ಪೊಲೀಸರಾಗಿರಲಿ ನಿಷ್ಪಕ್ಷಪಾತ ತನಿಖೆ ನಡೆಸಿ ಶಿಕ್ಷೆ ವಿಧಿಸುವುದು ಸರ್ಕಾರದ ಕರ್ತವ್ಯ. ಇಲ್ಲವಾದರೆ, ದೆಹಲಿಯ ಬೀದಿಗಳಲ್ಲಿ ಕಾನೂನು ರಕ್ಷಕರೇ ತಮ್ಮ ರಕ್ಷಣೆಗೆ ಧರಣಿ ಕುಳಿತುಕೊಳ್ಳುವ ಇಂತಹ ದೃಶ್ಯಗಳು ಮತ್ತೆ ಮತ್ತೆ ಮರುಕಳಿಸುತ್ತಲೇ ಇರುತ್ತವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR